the fact whether all those seats are filled or not every day.

The Hon'ble Sri H. C. DASAPPA.— Is not a tax levied on bus seating capacity?

Janab J. MOHAMED IMAM.—One day there may be 700 spectators; on another day there may be a very few. To ask him to pay every day for every seat, is quite unreasonable. This is a very unreasonable measure. The cinema goers are already taxed and if this levy also is added, it is again pricking a needle into the wound. I want the Government to think over and not have this measure passed in a hurry.

The Hon'ble Sri H. C. DASAPPA.— I am reminded of the usual thing with regard to all taxation proposals. The rich man always opposes the taxation proposals in the name of the poor and I think in this Janab Imam is no exception. (A Voice: But he is a friend of the poor!) That is what he must say. I may just say one thing. Let us turn over to Bombay. Sri Siddaveerappa referred to Bombay. You find this entertainment tax not only on cinemas but on all else. One anna for every four annas when it does not exceed four annas; that is as much as 25 per cent. Then $2\frac{1}{2}$ annas when it is between 4 annas and 8 annas. (A Voice: Is it entertainment tax or seating tax?) Entertainment tax. 5 annas between 8 annas and Re. 1; 10 annas between Rs. 1 and 2; Rs. 1-4-0 between Rs. 2 and 4; Rs. 2 between Rs. 4 and 5 and so on. I do not want to be so harsh as this. It is a very little thing that we are trying to do.

Sri B. M. SHAMANNA GOWDA (Bangalore Retroceded area-General).— What is the average income in Mysore and what is the average income in Bombay?

The Hon'ble Sri H. C. DASAPPA.— Bombay's average is Bombay's average and Bangalore's average is Bangalore's average. Let nobody be scared away by this tax. I know a lot of propaganda going on outside and I think no Hon'ble Member here is going to be taken in by such kind of propaganda. I think this Bill may go to the Select Committee.

Mr. SPEAKER.—The question is.—

"That the Mysore Cinematograph Entertainments Tax Bill, 1951, be referred to a Select Committee consisting of following members with instructions to report before the close of the Session.—

Sri V. M. Mascarenhas
Sri T. Subramanya
Sri H. Siddveerappa
Sri H. C. Linga Reddy
Sri B. Hutche Gowda
Sri K. V. Shankara Gowda
Sri M. N. Jois
Sri M. L. Nanjaraj Urs,
Sri M. Govinda Reddy, and
Sri V. S. Narayana Rao (mover)."

The motion was adopted.

The Mysore Motor Vehicles Taxation and Tolls Bill, 1951,

Motion to introduce.

The Hon'ble Sri H. SIDDAIYA (Minister for Revenue and Excise).— Sir, I beg to introduce the Mysore Motor Vehicles Taxation and Tolls Bill, 1951, the same have been published in the *Mysore Gazette*, Extraordinary, dated 29th March 1951 under Rule 36 of the Mysore Legislative Rules.

Motion to suspend Standing Order.

The Hon'ble Sri H. SIDDAIYA.—I also beg to move that Standing Order 30 of the Legislative Assembly Standing Orders be suspended.

Mr. SPEAKER.—I have no objection.

Motion to consider

The Hon'ble Sri H. SIDDAIYA.—Sir, I beg to move.—

"That the Mysore Motor Vehicles Taxation and Tolls Bill, 1951, be taken into consideration."

Janab J. MOHMED IMAM.—Let them allot a full day for discussion. There is hardly two minutes' time. They want to rush through such an important measure. It is in the interest of the Government and the people to have sufficient time to discuss this Bill. Let them allot some other day for discussion on this Bill. I think the Hon'ble Finance Minister may allot a separate day.

The Hon'ble Sri H. C. DASAPPA.— But I had given ample notice in my speech.

Janab J. MOHAMED IMAM.— But we must have the entire body of the Act befor us.

The Hon'ble Sri H. SIDDAIYA.— This Bill will have to come into force from the 1st April and it is indicated already in the budget speech of the Hon'ble Finance Minister and so the Standing Order is suspended. I do not think there is anything else which comes in the way of taking up the consideration of this Bill at this stage.

Janab J. MOHAMED IMAM.—But the entire Act has been revised. The whole thing comes in a new form. It is not merely an amendment. It is a Bill which comprises the whole thing. Look at the volume of the Bill here. The whole thing is recast. It requires a deeper study.

The Hon'ble Sri R. CHENNIGA-RAMIAH (Minister for Local Self-Government).—But in any case you are not going to support it!

Janab J. MOHAMED IMAM.—Who knows? I may support it; but you must do justice on your part.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ.)— ಸ್ವಾಮಿ, ಈ ಬಿಲ್ಲು 29ನೆಯ ತಾರೀಖು ಪ್ರಕಟವಾಗಿ 30ನೆಯ ತಾರೀಖು, ಎಂದರೆ, ನೆನ್ನೆಯ ದಿವಸ ನಮ್ಮ ಕೈಗೆ ಬಂದಿದೆ. ಆದುದರಿಂದ ಇದರ ಚರ್ಚೆಯನ್ನು 3ನೆಯ ತಾರೀಖು ಅಥವ 4ನೆಯ ತಾರೀಖು ತೆಗೆದು ಕೊಳ್ಳಬೇಕೆಂದು ನನ್ನ ಸಜೆಶನೆ. ಈಗ ಚರ್ಚೆಯಾಗು ವುದಕ್ಕೆ ಸಾಕಾದಷ್ಟು ಕಾಲವೂ ಇಲ್ಲ. ಇದು ನಮಗೆ ತಲಪಿದ್ದೇ ನೆನ್ನೆಯ ದಿನ. ಇದನ್ನು ನೋಡುವುದಕ್ಕೂ ನಮಗೆ ಸಾಕಾದಷ್ಟು ಅವಕಾಶ ಕೊಟ್ಟಿಲ್ಲ.

ಅಧ್ಯಕ್ಷರು.—ಅದಕ್ಕೇ Standing Order 30ನ್ನು ಸಸ್‌ಪೆಂಡ್ ಮಾಡಿ ಇದನ್ನು ಚರ್ಚೆಗೆ ತೆಗೆದು ಕೊಂಡಿರುವುದು.

ಜನಾಬ್ ಜೆ. ಮಹಮದ್ ಇಮಾಮ್‌ರವರು.— ಟ್ಯಾಕ್ಸೇಷನ್‌ಗೆ ಸಂಬಂಧಪಟ್ಟ ಮಸೂದೆಯನ್ನು ಐದು ನಿಮಿಷದಲ್ಲಿ ಮುಗಿಸಬೇಕೆಂದರೆ ಹೇಗೆ? They want to rush through every measure.

ಶ್ರೀ ಬಿ. ಚನ್ನಬೈರೇಗೌಡರು.—ದೇಶದಲ್ಲಿ ಒಂದು ಹೊಸ ತೆರಿಗೆಯನ್ನು ಹಾಕುವಾಗ ಅದನ್ನು ಪರಿಶೀಲನೆ ಮಾಡಲು ಸಾಕಾದಷ್ಟು ಕಾಲಾವಕಾಶವನ್ನು ಕೊಡದೆ ಹೀಗೆ ಮಾಡಿದರೆ ಹೇಗೆ?

ಅಧ್ಯಕ್ಷರು.—If the Hon'ble Member wants to oppose the Bill, he may do so.

ಶ್ರೀ ಬಿ. ಚನ್ನಬೈರೇಗೌಡರು.—ಯಾವುದಕ್ಕೂ ಕಾಲ ಸಾಲದು, ಇದು ನಮಗೆ ನೆನ್ನೆ ದಿವಸ ತಲಪಿದೆ. ಸಾಕಾದಷ್ಟು ಕಾಲಾವಕಾಶ ಕೊಡದೆ ಆತುರದಲ್ಲಿ ಇದನ್ನು ಪಾಸು ಮಾಡಿಸಿಕೊಳ್ಳಬಾರದು.

Mr. SPEAKER.—He could have given notice of an amendment for circulation of the Bill. ತಿದ್ದುಪಡಿ ಕಳುಹಿಸಬಹುದಾಗಿತ್ತು.

ಜನಾಬ್ ಜೆ ಮಹಮದ್ ಇಮಾಂಮ್‌ರವರು.— ತಿದ್ದುಪಡಿ ಕಳುಹಿಸುವ ಪ್ರಮೇಯವೇ ಇಲ್ಲ. ಇದನ್ನು ಚರ್ಚೆ ಮಾಡುವುದಕ್ಕೆ ಕಾಲವೇ ಸಾಲದು. ಸಾಕಾದಷ್ಟು ಕಾಲಾವಕಾಶ ಸದಸ್ಯರಿಗೆ ಇದೆಯೇ ಇಲ್ಲವೆ ಎಂಬುದನ್ನು ತೀರ್ಮಾನಿಸುವುದು ಅಧ್ಯಕ್ಷರ ಕೈಯಲ್ಲಿದೆ.

Mr. SPEAKER.—We may sit till 9 or 10 O'clock. I have no objection.

ಶ್ರೀ ಬಿ. ಚನ್ನಬೈರೇಗೌಡರು.—ಈ ದಿನ ಸಭೆ ಆರು ಘಂಟೆಯವರೆಗೆ ಸೇರಬೇಕೆಂದು ತಾವು ಗೊತ್ತುಮಾಡಿದ್ದೀರಿ.

Mr. SPEAKER.—If the Hon'ble Member wants to oppose the Bill he can do so.

(At this juncture, the lights failed).

Sri M. N. JOIS.—We cannot sit in darkness, Sir.

The Hon'ble Sri H. C. DASAPPA.—I would certainly have accommodated if the Hon'ble Member had sent in a single amendment.

Janab J. MOHAMED IMAM.—No amendment is necessary. We are opposing the entire Bill.

Janab MAHOMED HANIEF (Bangalore—Muslim).—Let not the Government try to justify this way of hurrying that. To-morrow this Bill must become a law.

The Hon'ble Sri H. C DASAPPA.—Sufficient indication of this Money Bill was given at the time when I made the Budget speech. Even here, if my friends see, there is nothing very wonderful; there is no drastic change. There was enough time for my Hon'ble friend Channabyre Gowda to have suggested some amendments. Nothing of the sort was done. The question is whether the attitude on the part of the Opposition to oppose the Bill is a correct one. If they had sent in any amendment, then I would have seen that more time was given. Supposing we discussed the whole thing about it. It must be either thrown out or accepted. Those are the only two alternatives that are now before the House. It is open for us to see that if there are any such valid and strong grounds urged against any specific motion of the Bill, the Bill is thrown out. Personally I feel that it is a very innocuous one. It will be seen that the tax is very much less than what it is in

Madras. The only thing I say is that the matter was fairly simple and it did not require so much of discussion.

Janab MAHOMED HANIEF.—My point is this. We may be in agreement with the Bill; that is not the point I have been trying to make out. I am not talking on the merits of the Bill. Some of us feel that we should contribute our quota to the discussion of the Bill and we should not be deprived of the chance simply because there are only two minutes in between us. There should not be any question of hurrying it. So far as I am concerned I have nothing to say on the Bill. But some others may like to speak on it. Why should you hurry it?

Janab SYED ABDUR RAHMAN (Chikmagalur *cum* Shimoga–Muslim).—The unfortunate position is that the Bill should become law by the 1st of April and it has been specified so in the Bill. The Hon'ble Minister in his Budget speech has already given an indication of the Bill coming up before the House. I think the House may take up the Bill for consideration now and finish it to-morrow. As Janab Mohamed Hanief stated, let us not rush through the measure. Can we get over the situation? I think we can sit for half an hour more and consider the Bill.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಇವತ್ತು 6 ಘಂಟೆಗೆ ಸಭೆ ಮುಗಿದು ಹೋಗುತ್ತದೆಂದು ತಿಳಿದು ಈಗಾಗಲೇ ಏರ್ಪಾಡಾಗಿರುವ ಟೀ ಪಾರ್ಟಿಗೆ ಎಲ್ಲರೂ ಕಾಯುತ್ತಿದ್ದಾರೆ. ಈಗಾಗಲೇ 6½ ಘಂಟೆಯಾಪರೂ ಇದಿನ್ನೂ ಮುಗಿದಿಲ್ಲ. ಅಂಥಾದ್ದರಲ್ಲಿ ಅವರು ಹೇಳಿದಂತೆ ಇನ್ನೂ ಅರ್ಧ ಗಂಟೆ ಕುಳಿತುಕೊಳ್ಳಬೇಕಾದರೆ, ಹೇಗೆ ಸ್ವಾಮಿ? ಜೊತೆಗೆ ದೀಪಗಳೆಲ್ಲ ಹೋಗಿಬಿಟ್ಟಿವೆ. ದೇಶದ ಮೇಲೆ ಒಂದು ಹೊಸತೆರಿಗೆ ಹಾಕುವಾಗ ಎಂತಹ ಅಶುಭ ಸೂಚನೆಯಾಗಿರುತ್ತೆಂಬುದನ್ನೂ ಸಹ ತಾವು ಗಮನಿಸಬೇಕಾಗಿರುತ್ತೆ, ಮತ್ತು ಬೆಳಕಿಲ್ಲದೆ ಪುಸ್ತಕದ ಸೆಕ್ಷನ್‌ಗಳನ್ನು ಓದುವುದಕ್ಕೂ ಕಣ್ಣು ಕಾಣಿಸುವುದಿಲ್ಲ. ಆದಲ್ಲದೆ ಜನರಮೇಲೆ ಒಂದು ತೆರಿಗೆಯನ್ನು ಹೊರಿಸುವಂಥ ಈ ಮಸೂದೆಯನ್ನು ನಿನ್ನೆ ದಿವಸ ತಾನೆ ನಮ್ಮ ಕೈಸಿಗೆ ಕೊಟ್ಟಿದ್ದೀರಿ. ಇವತ್ತು ಬೆಳಿಗ್ಗೆಯಿಂದ ಸಂಜೆಯವರೆಗೂ ಒಂದೇ ಸಮನಾಗಿ ಇಲ್ಲಿ ಸಭೆ ಸೇರಿದ್ದೇವೆ. ಅಂದಮೇಲೆ ನಾವು ಈ ಮಸೂದೆಯನ್ನು ಸ್ವಲ್ಪ ಓದಿ ಅರ್ಥ ಮಾಡಿಕೊಳ್ಳುವುದಕ್ಕಾದರೂ ವಿರಾಮವೆಲ್ಲಿ? ಇಲ್ಲಿ ರೈಟ್ ಇಲ್ಲದೆ ಸಭೆಯ ನಡವಳಿಕೆಗಳನ್ನು ರಿಪೋರ್ಟು ಮಾಡುವುದಕ್ಕೂ ಕಷ್ಟ. ಆದ್ದರಿಂದ ದಯವಿಟ್ಟು ಇವತ್ತು ಸಭೆಯನ್ನು ಮುಂದುವರಿಸಿ 4ನೆಯ ತಾರೀಖು ಈ ಮಸೂದೆಯನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಎಕ್ಸೈಜ್ ಸಚಿವರು).—ಅಧ್ಯಕ್ಷರೇ, ನಾನೇನೂ ಈ ಮಸೂದೆಗೆ ಹೆಚ್ಚಿಗೆ ಕಾಲ ಕೇಳುವುದಿಲ್ಲ. ಅರ್ಧ ಘಂಟೆಯೊಳಗೆ ಮುಗಿಸಿಬಿಡಬಹುದು, ಇದನ್ನು ಇಷ್ಟು ತ್ವರಿತವಾಗಿ ಇಂದೇ ಚರ್ಚೆಮಾಡಬೇಕೆಂಬುದಕ್ಕೆ ಕಾರಣ ಇಷ್ಟೆ. ನಾಳೆಯೇ ಈ ಮಸೂದೆ ಜಾರಿಗೆ ಬರಬೇಕಾಗಿದೆ. ಏಕೆಂದರೆ ಇದು ಒಂದು combined ಶಾಸನವಾಗಿ ಮೈತ್ನೂರು ವಾಹನಗಳ ಮೇಲೆ ತೆರಿಗೆ ವಿಧಿಸುವ ಕಾನೂನನ್ನೂ ಮತ್ತು ರೋಡ್ ಟ್ರಾಫಿಕ್ ಕಾನೂನನ್ನೂ ಒಳಗೊಂಡಿದ್ದಾಗಿದೆ. ಹಿಂದಿದ್ದ ಕಾನೂನು ನಾಳೆಯಿಂದಲೇ ರಿಪೀಲ್ ಆಗುವುದಾಗಿದೆ. ಆದ್ದರಿಂದ ಈ ಕಾನೂನನ್ನು ಜಾರಿ ಮಾಡಬೇಕಾದರೆ, ಇಂದೇ ಈ ಮಸೂದೆ ಈ ಸಭೆಯಲ್ಲಿ ಅನುಮೋದಿಸಲ್ಪಟ್ಟು ನಾಳೆಯ ಹೊತ್ತಿಗೆ ಕಾನೂನು ಸಿದ್ಧವಾಗಬೇಕು. ಸೆಂಟ್ರಲ್ ಆಕ್ಟ್‌ಗೂ ಇದಕ್ಕೂ ಹೋಲಿಸಿದರೂ ಸಹ ಹೆಚ್ಚಿಗೆ ಏನೂ ಬದಲಾವಣೆಗಳಿಲ್ಲ. ಹೀಗಿರುವಾಗ ಇಂದೇ ಇದನ್ನು ಪೂರ್ತಿ ಮಾಡಿ ನಾಳೆ ಜಾರಿಗೆ ತರದೆ ಟ್ಯಾಕ್ಸ್ ವಸೂಲಿಗೆ ತೊಂದರೆಯಾಗುತ್ತದೆ. ಈಗ ಇದರ ಪ್ರಕಾರ ಗೊತ್ತು ಮಾಡಿರುವ ಹೆಚ್ಚಿಗೆ ದರ ನಾಳೆಯಿಂದಲೇ ಜಾರಿಗೆ ಬರದೆ ಹೋದರೆ, ಒಟ್ಟು ಈ ತ್ರೈಮಾಸಿಕ ತೆರಿಗೆಯೇ ಹೊರಟು ಹೋಗುತ್ತದೆ. ವಿಷಯ ಇಷ್ಟು ತುರ್ತಿನ ದಾದ್ದರಿಂದ ಇಷ್ಟು ಒತ್ತಾಯ ಮಾಡಬೇಕಾಗಿದೆ, ಅಷ್ಟೆ. ಇನ್ನೂ ಮುಂಚೆಯೇ ಮುದ್ರಿಸಿ ಸಭೆಯ ಅವಗಾಹನೆಗೆ ತಂದು ಒಪ್ಪಿಗೆಯನ್ನು ಪಡೆಯಬಹುದಾಗಿತ್ತೆಂಬುದನ್ನು ಒಪ್ಪುತ್ತೇನೆ. ಕಾರಣಾಂತರಗಳಿಂದ ಅದು ಸಾಧ್ಯವಾಗಿಲ್ಲ. ಅಲ್ಲದೆ ಈ ಮಸೂದೆಯಲ್ಲಿ ಕಷ್ಟತರವಾದ ವಿಷಯವಾವುದೂ ಇಲ್ಲ; ಹಾಲಿ ನಮ್ಮ ಸಂಸ್ಥಾನದ ಟ್ಲರತಕ್ಕದ್ದೇ.

ಈಗ ಈ ಮಸೂದೆಯಿಂದ ಎಷ್ಟು ಹಣ ಹೆಚ್ಚಿಗೆ ಬರುವುದೆಂಬುದನ್ನು ನೋಡುವುದಾದರೆ, ಹಾಲಿ 1950ನೆಯ ಡಿಸೆಂಬರ್‌ವರೆಗಿನ ಲೆಕ್ಕಗಳ ಪ್ರಕಾರ ನಮ್ಮ ಸಂಸ್ಥಾನದಲ್ಲರತಕ್ಕ ವಾಹನಗಳ ಸಂಖ್ಯೆ, ಮೋಟಾರು ವಾಹನಗಳು 10,000. ಇದರಲ್ಲಿ ಮೋಟಾರು ಕಾರುಗಳು ಮತ್ತು ಸೈಕಲ್ಲುಗಳು 7,000ದ ವರೆಗಿವೆ. ಬಾಕಿ ಉಳಿದಿರತಕ್ಕ 3,000 ವಾಹನಗಳಲ್ಲಿ ಟ್ಯಾಕ್ಸಿಕ್ಯಾಬ್ಸ್, ಬಸ್ಸುಗಳು ಮತ್ತು ಲಾರಿಗಳು ಇವು ಮೂರೂ ಸೇರಿವೆ. ಇವು 1946ನೆಯ ಇಸವಿಯಲ್ಲಿ ಎಷ್ಟಿತ್ತು, ಈಗ 1949, 1950ರಲ್ಲಿ ಎಷ್ಟು ಹೆಚ್ಚಿದೆಯೆಂಬುದನ್ನು ಹೇಳುತ್ತೇನೆ. 1946ರಲ್ಲಿ 1114 ಇತ್ತು; 1949ರಲ್ಲಿ 2,384 ಆಯಿತು, ಈ ಡಿಸೆಂಬರಿಗೆ ಹೆಚ್ಚುಕಡಿಮೆ 3,000ಕ್ಕೆ ಏರಿದೆ. ಹೀಗೆ ವಾಹನಗಳ ಸಂಖ್ಯೆ ಹೆಚ್ಚಾಗಿ ರಸ್ತೆಗಳು ಬೇಗ ಹೀನ ಸ್ಥಿತಿಗೆ ಬರುತ್ತಿವೆ. ರಸ್ತೆಗಳು ಚೆನ್ನಾಗಿರಬೇಕೆಂದು ಮಾನ್ಯ ಸದಸ್ಯರೆಲ್ಲರೂ ಕಳೆದ 8 ದಿವಸದಿಂದಲೂ ಒಂದೇ ಸಮನಾಗಿ ಹೇಳುತ್ತಿದ್ದಾರೆ. ಇದಕ್ಕೆ ದುಡ್ಡುಬೇಕು. ಈ ಕಾರಣದಿಂದ ಈಗ ತಂದಿರುವ ಮಸೂದೆ ನ್ಯಾಯವಾಗಿದೆ ಮತ್ತು ಅವಶ್ಯಕವಾಗಿದೆಯೆಂಬುದನ್ನು ನಾನು ವಿವರಿಸಿ ಹೇಳಬೇಕಾದ್ದಿಲ್ಲ. ಇಂಥ ಸಂದರ್ಭದಲ್ಲಿ ಈಗ ನಾವು ಸೂಚಿಸಿರುವ ತೆರಿಗೆಯಾದರೂ ಲಾರಿಗಳು, ಬಸ್ಸುಗಳು, ಟ್ಯಾಕ್ಸಿ ಕ್ಯಾಬುಗಳು ಮತ್ತು ಕಾಂಟ್ರಾಕ್ಟ್ ಕ್ಯಾರಿಯೇಜುಗಳು—ಈ ನಾಲ್ಕು ಬಾಬುಗಳಿಗೆ ಮಾತ್ರ ಒಬ್ಬ ಸದಸ್ಯರು ಇದನ್ನು ಪುಷ್ಟೀಕರಿಸುತ್ತಾ, ನಾವಿಲ್ಲಿ ಸೂಚಿಸಿರುವ ದರ ಮದ್ರಾಸಿನಲ್ಲರುವುದಕ್ಕಿಂತ ಕಡಮೆ ಎಂದು ಹೇಳಿದರು. ಅಷ್ಟು ಮಾತ್ರ ಹೇಳುವುದಲ್ಲ, very much lower even after enhancing the rates ಎಂದು ನಾನು ಹೇಳುತ್ತೇನೆ.

(ಮಾನ್ಯ ಶ್ರೀ ಎಚ್ ಸಿದ್ದಯ್ಯನವರು)

ಎರಡು ಭಾಗ ಮಾಡಿದ್ದೆವು. ಇದು ಸರಿಯಲ್ಲವೆಂದು ಕಂಡುಬಂದಮೇಲೆ (ಲೇಡನ್ ವೈಟ್) ಭರ್ತಿ ಲಾರಿಗಳ ಮೇಲೆ ಟ್ಯಾಕ್ಸ್ ವಿಧಿಸತಕ್ಕದ್ದೇ ಸರಿ, ಖಾಲಿ ಲಾರಿಗಳ ಮೇಲೆ ಟ್ಯಾಕ್ಸ್ ವಿಧಿಸತಕ್ಕದ್ದು ಸರಿಯಲ್ಲವೆಂದು ನಿರ್ಧರ ಮಾಡಲಾಗಿದೆ. ಮದ್ರಾಸಿನಲ್ಲಿ ಈ ರೀತಿ ಮಾಡಿದ್ದಾರೆ. ಈಗ ನಾವು ವಿಧಿಸಿರತಕ್ಕ ತೆರಿಗೆಯೂ ದರೂ very much lower, even after this enhanced rates.....

ಶ್ರೀ ಬಿ. ಚನ್ನಬೈರೇಗೌಡರು.—ಈ ಬಿಲ್ಲಿನ ಮೇಲೆ ಮಾತನಾಡತಕ್ಕ ಸದಸ್ಯರು ಇನ್ನೂ ಬಹಳವಾಗಿದ್ದಾರೆ. ಈಗಾಗಲೆ ವೇಳೆ ಬಹಳ ಆಗಿದೆ, ಇದರ ಮೇಲೆ ತಿದ್ದುಪಡಿಗಳನ್ನು ಸೂಚಿಸಲಿಕ್ಕೂ ಕೂಡ ನಮಗೆ ಕಾಲಾವಕಾಶವಿಲ್ಲ. ಹೀಗೆ ತ್ವರಿತದಲ್ಲಿ ಇದನ್ನು ತಂದು, ಇದಕ್ಕೆ ನಮ್ಮ ಅನುಮತಿಕೊಡಬೇಕೆಂದರೆ ಹೇಗೆ ಸಾಧ್ಯ? ಹೀಗೆ ಒಂದು ಮಸೂದೆಯು ಪಾಸಾಗಬೇಕಾಗಿದ್ದರೆ ಅದಕ್ಕೆ ಎಷ್ಟು ಕಾಲಾವಧಿಯನ್ನು ಗೊತ್ತುಮಾಡಲಾಗಿದೆಯೋ ಅಷ್ಟನ್ನೂ ಕೂಡ ಈಗ ತಾವು ಕೊಟ್ಟಿಲ್ಲ.

Mr. SPEAKER.—Standing Order 30 has been suspended and the Bill has been taken into consideration.

ಶ್ರೀ ಬಿ. ಚನ್ನಬೈರೇಗೌಡರು.—ನಮಗೆ ಸಾಕಷ್ಟು ಕಾಲಾವಕಾಶಕೊಡದೆ ಹೀಗೆ ತಾವು ಸಭೆಯ ಕಾರ್ಯಕಲಾಪಗಳನ್ನು ನಡೆಸಬೇಕೆಂದರೆ, ನಮಗೆ ನಮ್ಮ ಅಭಿಪ್ರಾಯಗಳನ್ನು ತಿಳಿಸಲಿಕ್ಕೆ ಬಹಳ ಕಷ್ಟವಾಗುತ್ತಿದೆ. ಬಿಲ್ಲಿನಲ್ಲಿ ಏನು ಹೇಳಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೂ ಕೂಡ ಕಾಲಾವಕಾಶವಿಲ್ಲ.

Mr. SPEAKER.—I agree with the Hon'ble Member and request the Government to see that sufficient time is given to the House hereafter.

The Hon'ble Sri H. C. DASAPPA.—We will try our best Sir. The whole Session commenced very late I must say.

Mr. SPEAKER.—That is not the mistake of the House; that was the mistake of the Government.

The Hon'ble Sri H. C. DASAPPA.—I have stated that because of certain complications we could not convene the Session early.

ಶ್ರೀ ಬಿ. ಚನ್ನಬೈರೇಗೌಡರು.—ಈಗ ಇದನ್ನು ಸರ್ಕಾರದವರು ಉದ್ದೇಶ ಪೂರ್ವಕವಾಗಿಯೇ ಹೀಗೆ ಮಾತಿದ್ದರೆ ಸೆಲೆಕ್ಟ್ ಸಮಿತಿ ಮುಂದೆ ಹೋಗತಕ್ಕಂಥ ಮಸೂದೆಗಳನ್ನೆಲ್ಲಾ ಮೊದಲು ಮೊದಲು ಚರ್ಚೆಗೆ ತೆಗೆದುಕೊಂಡು, ಈಗ ಇಂಥಾ ಮುಖ್ಯವಾದ ಮಸೂದೆಯನ್ನು ತೀರಾ ವೇಳೆಯಾಗಿರುವ ಸಮಯದಲ್ಲಿ ತಂದಿರತಕ್ಕದ್ದನ್ನು ನೋಡಿದರೆ, ಇವರು ಉದ್ದೇಶಪೂರ್ವಕವಾಗಿಯೇ ಹೀಗೆ ಮಾಡಬೇಕೆಂದು ಮಾಡಿದ್ದಾರೆ. ಈ ಮಸೂದೆಯನ್ನೇ ಇವರು ಏಕೆ ಮೊದಲು ಚರ್ಚೆಗೆ ತೆಗೆದುಕೊಳ್ಳಬಾರದಾಗಿತ್ತು ಎಂದು ಕೇಳುತ್ತೇನೆ. ಹೀಗೆ ಪ್ರಾಮುಖ್ಯವಾದ ಮಸೂದೆಯನ್ನು ಹಿಂದಕ್ಕಿಟ್ಟುಕೊಂಡು, ಸೆಲೆಕ್ಟ್ ಸಮಿತಿ ಮುಂದೆ ಹೋಗತಕ್ಕವುಗಳನ್ನು ಮೊದಲೇ ಚರ್ಚೆಗೆ ತಂದು ಕಾಲವನ್ನು ತಳ್ಳಿದ್ದೇಕೆ? ಈ ಮಸೂದೆಯನ್ನೇ ತಾವು ಚರ್ಚೆಗೆ ಸಭೆ ಪ್ರಾರಂಭವಾದ ಕೂಡಲೇ ತೆಗೆದುಕೊಳ್ಳಬಹುದಾಗಿತ್ತು. ಈ ಮಸೂದೆಯನ್ನು ವಿರೋಧಿಸತಕ್ಕ ಮಾನ್ಯ ಸದಸ್ಯರನೇಕರು ಇದ್ದಾರೆ ಹಾಗೆ ನಮ್ಮ ವಿರೋಧಾಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ಕಾಲಾವಕಾಶವೇ ಇಲ್ಲ. ಈ ಬಗ್ಗೆ ಅಧ್ಯಕ್ಷರು ನಮಗೆ ಕಾಲಾವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸಂಬಂಧವಾಗಿ ಎದುರುಪಕ್ಷದ ನಾಯಕರಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿಲ್ಲವೆಂಬ ಆಂಶವನ್ನು ತಾವು ಗಮನದಲ್ಲಿಟ್ಟುಕೊಂಡು ಮೈನಾರಿಟಿ ಎದುರುಪಾರ್ಟಿಗೆ ರಕ್ಷಣೆ ಕೊಡಬೇಕಾಗಿ ವಿನಯದಿಂದ ಪ್ರಾರ್ಥಿಸುತ್ತೇನೆ ಮತ್ತು ಇದನ್ನು ಮುಂದುವರಿಸುವುದು ಅಷ್ಟು ಸೂಕ್ತವಲ್ಲವೆಂದು ನಾನು ತಿಳಿಸಲಿಚ್ಛಿಸುತ್ತೇನೆ.

Mr. SPEAKER.—We shall adjourn for one hour and come back.

The Hon'ble Sri H. C. DASAPPA.—If it is going to serve the purpose of Janab Imam, I have no objection.

Mr. SPEAKER.—Shall we adjourn for one hour?

The Hon'ble Sri H. C. DASAPPA.—I have an idea of meeting at 8-30.

ಶ್ರೀ ವಿ. ಎಸ್. ನಾರಾಯಣರಾಯರು.—ಅಧ್ಯಕ್ಷರೇ, ಈಗಾಗಲೇ ಬಹಳ ವೇಳೆಯಾಗಿ ಹೋಗಿದೆ. ನಾಳೆ ಭಾನುವಾರವಾಗಿರುವುದರಿಂದ ಕೆಲವು ಮಾನ್ಯ ಸದಸ್ಯರು ತಮ್ಮ ಊರುಗಳಿಗೆ ಹೋಗಿಬರಬೇಕೆಂಬ ಇರಾದೆಯುಳ್ಳವರಾಗಿರುವುದರಿಂದ ಸಭೆಯನ್ನು.....

The Hon'ble Sri H. C. DASAPPA.—You must help the Opposition.

Mr. SPEAKER.—We shall meet at 8-30 again.

The House adjourned at Fifty five Minutes past Six of the Clock and reassembled at Thirty Minutes past Eight of the Clock, Mr. Speaker (The Hon'ble Sri V. Venkatappa) in the Chair.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ಮುಂದುವರಿದು).—ಇಲ್ಲಿರತಕ್ಕಂಥ ಸುಮಾರು 10,000 ಮೋಟಾರು ಗಾಡಿಗಳಲ್ಲಿ ನಂಸ್ಥಾನದಲ್ಲಿ 5,369 ಮೋಟಾರು ಕಾರುಗಳಿವೆ, 1,723 ಮೋಟಾರು ಸೈಕಲ್‌ಗಳು ಇವೆ. ಇದರ ಪ್ರಕಾರ ಒಟ್ಟು 7 ಸಾವಿರ ಚಿಲ್ಲರೆ ಆಯಿತು. ಇದು ಖಾನಗಿಯವರದು. ಇವು 1949ನೆಯ ಜುಲೈನಲ್ಲಿ ಶೇಕಡ 50ರಷ್ಟು ತಿರುಗಿ ಹೆಚ್ಚಿವೆ. ಹಾಗೆ ಹೆಚ್ಚಿರುವುದು ಸುಮಾರು 2,878. ಅವು ಯಾವುವು ಎಂದರೆ ಮೋಟಾರು ಕ್ಯಾಬ್ಸ್ 160, ಮೋಟಾರು ಬಸ್ಸುಗಳು 922, ಮೋಟಾರು ಲಾರಿಗಳು 1,295. ಈ ಮೂರೂ ಸೇರಿ ರೌಂಡ್ ಫಿಗರ್ 3,000 ಆಗುತ್ತದೆ. ಹೀಗೆ ಹೆಚ್ಚಿರುವುದಕ್ಕೆ ಕೈಹಾಕಿರಲಿಲ್ಲ. ಈಗ ಈ ಮೂರು ಸಾವಿರ ಬಸ್ಸು, ಲಾರಿ ಮತ್ತು ಕ್ಯಾಬ್‌ಗಳಿಗೆ ದರ ಹೆಚ್ಚಿಸಬೇಕು ಎಂದು ಯೋಚನೆಮಾಡಿ ಈ ಬಿಲ್ಲನ್ನು

ತಯಾರುಮಾಡಿದೆ. ದರವನ್ನು ಮದ್ರಾಸಿನಲ್ಲಿರುವುದಕ್ಕೆ ಹೋಲಿಸಿದರೆ ಇಲ್ಲಿ ಈಗಿರುವ ದರ ಕಡಿಮೆಯಾಗಿದೆ. ಹೇಗೆಂದರೆ ಮದ್ರಾಸಿನಲ್ಲಿ ಬಸ್ಸುಗಳಿಗೆ ಸೀಟಿಂಗ್ ಟ್ಯಾಕ್ಸ್ 17 ರೂಪಾಯಿಗಳ ಒಂದು ದರ ಇದೆ. ಇನ್ನೊಂದು ದರ 30 ರೂಪಾಯಿಗಳಿದೆ. 30 ರೂಪಾಯಿಗಳಿರುವುದು 50 ಮೈಲಿಗಳಿಗೆ ಮೇಲೆ ಹೋಗುವುದಕ್ಕೆ, ಮೂರು ತಿಂಗಳಿಗೆ ಒಂದು ಸೀಟಿಗೆ ಇಷ್ಟು ಎಂದು ಎರಡು ತರಹ ದರ ನಿಗದಿ ಮಾಡಿದೆ. ನಮ್ಮಲ್ಲಿ ಈಗ ಸೀಟಿಂಗ್ ಟ್ಯಾಕ್ಸ್ ರೂ. 7-8-0, 7 ರೂಪಾಯಿಗಳು, 6 ರೂಪಾಯಿಗಳು ಎಂದು ಮೂರು ರೀತಿಯಾಗಿದೆ. ಮದ್ರಾಸಿನಲ್ಲಿ 30 ರೂಪಾಯಿಗಳಿರುವಾಗ ಜನರು ನಮ್ಮ ದೇಶದಲ್ಲೇ ಹೆಚ್ಚಿಗೆ ತೆರಿಗೆ ಹಾಕಿದ್ದಾರೆಂದು ಹೇಳುತ್ತಾರೆ. ಆದರೆ ಹಾಗಿಲ್ಲ. ಮದ್ರಾಸಿನಲ್ಲಿ ಮೈಲೇಜ್ ಸೆಸ್ ಇಲ್ಲ, ನಮ್ಮಲ್ಲಿದೆ. ಆದ್ದರಿಂದ ಸೀಟಿಂಗ್ ತೆರಿಗೆ ಹೆಚ್ಚಿಸುವುದು ಸರಿಯಲ್ಲ ಎಂದು ಸರ್ಕಾರದವರು ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಮೈಲೇಜ್ ಸೆಸ್ಸನ್ನು ಹೆಚ್ಚುಮಾಡುವುದು ನ್ಯಾಯ ನಮ್ಮತವಾಗಿದೆ. ಕಾರಣವೇನೆಂದರೆ ಯಾರು ಎಷ್ಟು ಮೈಲು ಪ್ರಯಾಣಮಾಡುತ್ತಾರೆ, ಎಷ್ಟು ದೂರಹೋಗಲು ಅವಕಾಶವಿದೆ ಎಂಬುದಕ್ಕೆ ಪಟ್ಟಿ ಮಾಡುತ್ತಾರೆ. ಅದಕ್ಕನುಸಾರವಾಗಿ ಕೊಡಬೇಕಾದ್ದು ನ್ಯಾಯವೇ ಹೊರತು ಸೀಟಿಂಗ್ ಟ್ಯಾಕ್ಸ್ ಹೆಚ್ಚಿಸುವುದು ಸರಿಯಿಲ್ಲ. ಕೆಲವರಿಗೆ 50 ಮೈಲಿಗಳು, 75 ಮೈಲಿಗಳು ಅಥವಾ 25 ಮೈಲಿಗಳು ಹೀಗೆಲ್ಲಾ ಪರ್ಮಿಟ್ ಇರಬಹುದು. ಆದ್ದರಿಂದ ಸೀಟಿಂಗ್ ಟ್ಯಾಕ್ಸ್ ಹೆಚ್ಚಿಸುವುದು ನ್ಯಾಯವಲ್ಲ, ಮೈಲೇಜ್ ಸೆಸ್ ಹೆಚ್ಚಿಸುವುದು ಸರಿ ಎಂದು ತೀರ್ಮಾನ ಮಾಡಿ ಅದರಂತೆ ಈ ಬಾಬಿನ ದರ ಮಾತ್ರ ಹೆಚ್ಚಿನ ಲಾಗಿದೆ.

ಶ್ರೀ ಎಂ. ಎಸ್. ಜೋಯಿಸ್‌ರವರು.—ಸೀಟಿಂಗ್ ತೆರಿಗೆ ಹೋಯಿತೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಮೊದಲು ಇದ್ದಹಾಗೇ ಇದೆ, ಹೆಚ್ಚಿಸಿಲ್ಲ. ಮೈಲೇಜ್ ಸೆಸ್ ಮೂರು ಭಾಗ ಮಾಡಿದೆ. ಕಾರ್ಪೊರೇಟ್ ರಸ್ತೆ ಅಥವಾ ಟಾರು ರಸ್ತೆ ಆಗಿದ್ದರೆ 6 ಕಾಸಿತ್ತು. ಅದನ್ನು ಒಂದಾಣೆಗೆ ಹೆಚ್ಚಿಸಿದೆ. ಸ್ಟೇಟ್ ಫಂಡ್ ರಸ್ತೆಗೆ ಇದು ಸಂಬಂಧಪಟ್ಟಿದೆ. ಅದೇ ಸ್ಟೇಟ್ ಫಂಡ್ ರಸ್ತೆಯಲ್ಲಿ ಟಾರು ರಸ್ತೆ, ಅಥವಾ ಕಾರ್ಪೊರೇಟ್ ರಸ್ತೆ, ಅಲ್ಲದಿರುವ ಮೆಟಲ್ ರಸ್ತೆಗೆ 6 ಕಾಸಿದ್ದುದನ್ನು 8 ಕಾಸುಮಾಡಿ ಮೈಲಿಗೆ 2 ಕಾಸು ಹೆಚ್ಚುಮಾಡಿದೆ. ಬಾಕಿ ಎಲ್ಲಾ ರಸ್ತೆಗಳಿಗೂ 6 ಕಾಸಿದ್ದುದನ್ನು 7 ಕಾಸು ಮಾಡಿ ಒಂದು ಕಾಸು ಹೆಚ್ಚಿಸಿದೆ. ಇದು ಬಸ್ಸುಗಳಿಗೆ ಮಾತ್ರ ಅನ್ವಯಿಸುತ್ತದೆ. ಲಾರಿಗಳಿಗೆ ಇಲ್ಲಿಯವರೆಗೆ ಎರಡು ಬಗೆ ಇದೆ. ಲಾರಿಗಳಿಗೆ unladen weight ಮತ್ತು laden weight ಮೇಲೆ ಹಾಕುವುದು ನರಿಯಲ್ಲ. ತೂಕದ ಮೇಲೆ ಹಾಕುವುದು ಎಲ್ಲಾ ಕಡೆಯೂ ಜಾರಿಯಲ್ಲಿದೆ. ನಮ್ಮಲ್ಲಿ ಮಾತ್ರ ಎರಡು ಭಾಗವಿತ್ತು. Laden ಲಾರಿ ಮೇಲೆ ಹಾಕುವುದು ನ್ಯಾಯ ಎಂದು ಕಂಡು ಬಂದು ಅದರಂತೆ ಹಾಕಿದೆ. ಮೊದಲು private purposeಗೆ ಅಥವಾ hireಗೆ ಅಥವಾ rewardಗೆ ಉಪಯೋಗಿಸಿದರೆ ಪಬ್ಲಿಕ್ ಕ್ಯಾರಿಯರ್ ಎಂದು ಅದಕ್ಕೆ ಹೆಚ್ಚು ದರವಿತ್ತು. ಈಗ ಆ ಎರಡನ್ನೂ ಒಂದೇ ಮಾಡಿ laden weight ಮೇಲೆ ಲೆಕ್ಕಹಾಕಿ ಈಗಿರುವ unladen weight ಆಧಾರದ ಮೇಲೆ laden weight ಗೊತ್ತುಮಾಡಿ ಅದರ ಮೇಲೆ ಶೇಕಡ 12½ಯಷ್ಟು ತೆರಿಗೆ ಹೆಚ್ಚಿಸಿದೆ. ಮದ್ರಾಸಿನಲ್ಲಿರುವ ದರವನ್ನು ನಮ್ಮ ದರದೊಂದಿಗೆ ಹೋಲಿಸಿದರೆ ನಮ್ಮಲ್ಲೇ ಕಡಮೆಯಾಗಿದೆ. ಉದಾಹರಣೆಗೆ 35 ಹಂದ್ರಟ್‌ವೈಟಿನಿಂದ 50 ಹಂದ್ರಡ್‌ವೈಟಿನವರೆಗೆ ನಮ್ಮ ದರ ಮತ್ತು ಮದ್ರಾಸಿನ ದರ ಲೆಕ್ಕಮಾಡಿದರೆ ನಮ್ಮಲ್ಲಿ 127 ರೂಪಾಯಿಗಳು ಆಗುವಾಗ ಮದ್ರಾಸಿನಲ್ಲಿ 200 ರೂಪಾಯಿಗಳಾಗುತ್ತವೆ. ಆದ್ದರಿಂದ ಹೇಗಾದರೂ ನಮ್ಮಲ್ಲಿ ಕಡಮೆಯಿದೆ. ಲಾರಿಗಳು ಖಾನಗಿಯವರದಾಗಿದ್ದರೆ 112½ ರೂಪಾಯಿಗಳು ಇಲ್ಲಿ ಆದರೆ, ಮದ್ರಾಸಿನಲ್ಲಿ 168¼ ರೂಪಾಯಿಗಳಾಗುತ್ತದೆ ಪಬ್ಲಿಕ್ ಕ್ಯಾರಿಯರ್‌ಗೆ ಕಡಮೆ, ಖಾನಗಿ ಲಾರಿಗಳಿಗೆ ಹೆಚ್ಚು, ಇದನ್ನು ಬಹು ಜನರು ಸ್ವಾಗತಿಸಿ ಸಂತೋಷಪಡಬೇಕು. ಹೀಗೆ ದರ ಕಡಮೆಯಿದೆ. ಆದ್ದರಿಂದ ಇದರ ಮೇಲೆ ಆಕ್ಷೇಪಣೆ ಬರುವುದಕ್ಕೆ ಕಾರಣವೇ ಇಲ್ಲ. ಉದಾಹರಣೆಗೆ ಒಬ್ಬರಿಗೆ ಬಸ್‌ಪರ್ಮಿಟ್ 50 ಮೈಲಿಗೆ ಇರುತ್ತದೆ ಎಂದು ಇಟ್ಟುಕೊಳ್ಳೋಣ. 50 ಮೈಲಿಗೆ ಸೀಟಿಂಗ್ ಟ್ಯಾಕ್ಸ್ ಎಷ್ಟಾಗುತ್ತದೆ ಎಂದರೆ ಮದರಾಸಿನಲ್ಲಿ 442 ರೂಪಾಯಿ ಹಾಕುತ್ತಾರೆ. 60 ಮೈಲಿ ಮೇಲ್ಪಟ್ಟು, 120 ಮೈಲಿ ಒಳಗಿದ್ದರೆ 705 ರೂಪಾಯಿ ಆಗುತ್ತದೆ. ಅದೇ ನಮ್ಮಲ್ಲಿ 60 ಮೈಲಿಗೆ 434 ರೂಪಾಯಿ, 100 ಮೈಲಿಗೆ 684 ರೂಪಾಯಿ ಆಗುತ್ತದೆ. ಅದು ಮ್ಯಾಗ್ನಿಮಂ. ನಮ್ಮಲ್ಲಿರುವುದನ್ನು ಮದರಾಸಿಗೆ ಹೋಲಿಸಿದರೆ ಕಡಿಮೆಯಾಗುತ್ತದೆ.

ಶ್ರೀ ಬಿ. ಚನ್ನಬೈರೇಗೌಡರು.—ಪ್ರಯಾಣಿಕರಿಗೆ ಹಾಕತಕ್ಕ ಮೈಲೇಜು ಎಷ್ಟು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದಕ್ಕೂ ಇದಕ್ಕೂ ಸಂಬಂಧವಿಲ್ಲ, ಅದು ಬೇರೆ ವಿಚಾರ ಆಯಿತು. ಆದ್ದರಿಂದ ಲಾರಿಗಳ ಲೆಕ್ಕ ಹಾಕಿದರೂ ಕೂಡ ಅಷ್ಟೇ, ಬಸ್ಸುಗಳ ಲೆಕ್ಕಹಾಕಿದರೂ ಕೂಡ ಅಷ್ಟೇ, ಮದರಾಸಿಗಿಂತ ಬಹಳ ಕಡಿಮೆಯಾಗುತ್ತದೆ. ಆಮೇಲೆ ಟ್ಯಾಕ್ಸಿ ಕ್ಯಾಬ್ಸ್‌ಗೆ ಮತ್ತು ಕಾಂಟ್ರಾಕ್ಟ್ ಕ್ಯಾರೇಜಸ್‌ಗೆ ಒಂದಕ್ಕೆ ಎರಡರಷ್ಟು ಮಾಡಬೇಕು. ಇವುಗಳೇನೂ ಅಷ್ಟು ಹೆಚ್ಚಲ್ಲ. ಇದರಿಂದ 10 ಲಕ್ಷ ರೂಪಾಯಿ ಜಾಸ್ತಿ ಯಾಗಬಹುದೆಂದು ನಿರೀಕ್ಷಣೆ ಮಾಡಲಾಗಿದೆ. ಇದು ನ್ಯಾಯವಾಗಿದೆ ಎಂದು ಹೇಳಿ ತಮ್ಮ ಮುಂದೆ ಈ ಮಸೂದೆಯನ್ನು ಮಂಡಿಸುತ್ತೇನೆ.

ಶ್ರೀ ಬಿ. ಚನ್ನಬೈರೇಗೌಡರು. ಅಗ್ರಿಕಲ್ಚರರ್ ಪರ್‌ಪಸ್‌ಗೆ 90 ರೂಪಾಯಿ ಎಂದು ಹೇಳಿದ್ದೀರಿ. ಅದು ಜಾಸ್ತಿ ಅಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಹೇಳಿ.

Mr. SPEAKER.—Motion moved :

"That the Mysore Motor Vehicles Taxation and Tolls Bill, 1951, be taken into consideration."

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ನಾಲ್ಕನೇ ಷೆಡ್ಯೂಲಿನಲ್ಲಿ ರಸ್ತೆ ಮತ್ತು ಸೇತುವೆಗಳ ಹೆಸರನ್ನು ಕೊಟ್ಟಿದ್ದೀರಿ. ಅದರ ಮೇಲೆ ಹಾಕತಕ್ಕ ತೆರಿಗೆಯನ್ನು ಈಗ ನೀವು ಹೆಚ್ಚು ಮಾಡಿದ್ದರೂ ಕೂಡ ಕೊಡಬೇಕೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಕ್ಟ್‌ನಲ್ಲಿ ಇರುವುದನ್ನು ಹೇಳಿದೆ ಅಷ್ಟೆ. ಹೊಸದೇನೂ ಅಲ್ಲ.

ಶ್ರೀ ಕೆ. ನಂಪಂಗಿರಾಮಯ್ಯನವರು.—ಇದರಿಂದ ಬರತಕ್ಕ ಹಣದಿಂದ ರಸ್ತೆ ರಿಪೇರಿ ಮಾಡಬೇಕೆಂಬುದಾಗಿ ಈ ಮಸೂದೆಯನ್ನು ತಂದಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು—ಹೌದು, ಅದೇ ಉದ್ದೇಶದಿಂದ ಮಾಡಲಾಗಿದೆ.

Sri M.N. JOIS.—Are you earmarking this money for road repairs? It is also one of the main intentions or purposes of the Government.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—Earmark ಮಾಡಲಾಗುತ್ತದೆಂದು ಹೇಳಲಕ್ಕಾಗುವುದಿಲ್ಲ. ಅದೇ ಉದ್ದೇಶದಿಂದ ಇದನ್ನು ತಂದಿದೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ಯಾಮಿ, ಈ ಬಿಲ್ಲನ್ನು ಈಚೆಗೆ (ಬ) ಸಂಸ್ಥಾನದ ಕಾನೂನುಗಳು ಇಂಡಿಯಾ ಸರ್ಕಾರದ ಕಾನೂನುಗಳಿಗನ್ವಯವಾಗುವಂತೆ ಇರಬೇಕೆಂದು ಆರ್ಡರ್ ಮಾಡಿದ ಮೇರೆ ತರಲಾಗಿದೆ. ಮತ್ತು ಇದರ ಜೊತೆಗೆ ತೆರಿಗೆಯನ್ನೂ ಸಹ ರಿವೈಸ್ ಮಾಡಬೇಕು ಎಂಬ ಉದ್ದೇಶದಿಂದ ತಂದಿದ್ದೀರಿ. ಈ ರೀತಿ ತೆರಿಗೆ ಹಾಕಬೇಕಾದರೆ ಅದಕ್ಕೆ ಕಾರಣವೇನು ಎಂಬುದು ಸ್ಪಷ್ಟವಾಗಲಿಲ್ಲ. ಎರಡು ಮೂರು ಕಾರಣಗಳನ್ನು ಈಗ ತಾನೇ ಹೇಳಿದ್ದರಲ್ಲಿ ಒಂದನೆಯದೇನೆಂದರೆ ಬಡ್ಜೆಟ್ ಖೋತಾ ಬಂದದ್ದೇ ಅಥವಾ ಈಗ ಇತರ ಕಡೆಗಳಿಗಿಂತಲೂ ನಮ್ಮ ದೇಶದಲ್ಲಿ ಕಡಿಮೆಯಾಗಿದೆ ಎಂಬ ಅಭಿಪ್ರಾಯವೇ ಎಂಬುದು ಖಚಿತವಾಗಿಲ್ಲ. ಅಲ್ಲದೆ ಇದಕ್ಕೆ ಸರಿಯಾಗಿ ನೋಟೀಸ್ ಕೊಟ್ಟು ಜನಗಳ ತಿಳಿವಳಿಕೆಗೆ ಒಂದು ಅವರ ಒಂದು ಅಭಿಪ್ರಾಯವನ್ನು ಸಂಗ್ರಹಿಸುವುದಕ್ಕಾಗಲೀ ಪ್ರತಿನಿಧಿಗಳಿಗೆ ತೆರಿಗೆ ಕೊಡತಕ್ಕವರ ಅಭಿಪ್ರಾಯವನ್ನು ತಿಳಿದು ಕೊಳ್ಳಲಿಕ್ಕಾಗಲೀ ಅವಕಾಶ ಸಿಕ್ಕಿಲ್ಲ. ಇಷ್ಟು ಆತುರದಲ್ಲಿ ಈ ಮಸೂದೆಯನ್ನು ತಂದರೆ ಕಂದಾಯ ಕೊಡತಕ್ಕವರಿಗೆ ಸರಿಯಾದ ನ್ಯಾಯ ದೊರೆತಂತೆ ಆಗುವುದಿಲ್ಲವೆಂಬ ಕಾರಣದ ಮೇರೆ ಇದನ್ನು ವಿರೋಧಿಸಬೇಕಾಗಿದೆ. ಮತ್ತೊಂದು ಏನೆಂದರೆ 37½ ಲಕ್ಷ ರೂಪಾಯಿ ಬಡ್ಜೆಟ್‌ನಲ್ಲಿ ಖೋತಾ ಬಂದಿದೆ. ಅದಕ್ಕೋಸ್ಕರ ಈ ತೆರಿಗೆ ಹಾಕಿದ್ದೀರಿ. ಈ ತೆರಿಗೆ ಯಾವ ರೀತಿ ನ್ಯಾಯ ಸಮ್ಮತವಾಗಿದೆ ಎಂಬುದನ್ನು ಸೂಚಿಸಬೇಕಾದ್ದು ಮಾನ್ಯ ಸಚಿವರ ಕರ್ತವ್ಯವೆಂದು ಹೇಳಬೇಕಾಗಿದೆ. ಏಕೆಂದರೆ ನಮ್ಮ ದೇಶದಲ್ಲಿ ಮುಖ್ಯವಾಗಿ ವ್ಯಾಪಾರ ಮತ್ತು ವ್ಯವಸಾಯಕ್ಕೆ ಬೇಕಾದ ಸಂಚಾರ ಸೌಕರ್ಯ ವಿಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿ ಸಂಚಾರ ಮಾಡುವುದು ಬಹಳ ತೊಂದರೆಯಾಗಿದೆ. ಇದು ಉತ್ತಮವಾಗಬೇಕು. ಹೆಚ್ಚು ಸೌಕರ್ಯ ದೊರಕಬೇಕು. ಇತರ ಯಾವ ದೇಶಗಳಲ್ಲೂ ಕೂಡ ಇದನ್ನು ಒಂದು ಆಧಾರದಂತೆ ಭಾವಿಸುತ್ತಾರೆ. ದೇಶದ ಅಭಿವೃದ್ಧಿಗೆ ಸಂಚಾರ ಸಾಧನ, ಸಂಚಾರ ಸೌಲಭ್ಯ ಮುಖ್ಯವಾದದ್ದು. ಇದನ್ನು ಅದಷ್ಟು ಸುಲಭವಾದ ರೀತಿಯಲ್ಲಿ ಒದಗಿಸಬೇಕಾಗಿದೆ. ಅದಕ್ಕೆ ಹಣ ಒದಗಿಸಲು ಸರ್ಕಾರದವರು ತೆರಿಗೆ ಹಾಕುವುದಕ್ಕೆ ಹೋದರೆ ಖಂಡಿತವಾಗಿಯೂ ಚಿನ್ನದ ಮೊಟ್ಟೆಯನ್ನು ಹಾಕುವ ಕೋಳಿಯನ್ನು ಕತ್ತರಿಸಿದ ಹಾಗಾಗುತ್ತದೆ. ಅದೂ ಅಲ್ಲದೆ ಈ ತೆರಿಗೆಯನ್ನು ಮದರಾಸಿನೊಡನೆ ಹೋಲಿಸಿದರೆ, ಮದರಾಸಿನಲ್ಲಿರುವಂತೆ ನೀವು ಅನುಸರಿಸಿಲ್ಲ. ಈಗ ಖೋತಾ ಬಡ್ಜೆಟ್ ಆಗುವುದಕ್ಕೆ ಕಾರಣ ಇಷ್ಟೆ. ಸಂದುಗೊಂದುಗಳಲ್ಲಿ ಹೋಗತಕ್ಕ ಖರ್ಚು ತಪ್ಪಿಸುವುದಕ್ಕೆ ಅನೇಕ ಸಲಹೆಗಳನ್ನು ಮಾಡಿದಾಗ್ಯೂ ಅದು ಯಾವುದೂ ಸರ್ಕಾರದವರ ಗಮನಕ್ಕೆ ಬಂದಿಲ್ಲ. ಆದ್ದರಿಂದ ಅದಷ್ಟು ಮಿತವ್ಯಯ ಮಾಡುವುದನ್ನು ಜಾರಿಗೆ ತರಬೇಕು. ಅದಷ್ಟು ಮಿತವ್ಯಯವನ್ನು ಜಾರಿಗೆ ತರಬೇಕು. ಅಲ್ಲದೆ ಈ ವಿಚಾರದಲ್ಲಿ ಎಕಾನಮಿ ಆಫೀಸರು ಮಾಡಿರುವ ವರದಿ ಹಳೆಯದಾಗಿ ಬಿಟ್ಟಿದೆ, ಇದನ್ನು ಜಾರಿಗೆ ತರುವುದಿರಲಿ, ಈ ಯೋಚನೆಯನ್ನು ಕೂಡ ಸರ್ಕಾರದವರು ಮಾಡುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಅವರು ಎಷ್ಟೋ ವಿಷಯಗಳನ್ನು ಕೂಲಂಕಷವಾಗಿ ವಿಮರ್ಶೆಮಾಡಿ, ಯಾವ ಯಾವ ಬಾಬಿನಲ್ಲಿ ಎಷ್ಟೆಷ್ಟು ಖರ್ಚು ಖೋತಾ ಮಾಡಬಹುದೆಂಬುದನ್ನು ತಮ್ಮ ವರದಿಯಲ್ಲಿ ಸೂಚಿಸಿದ್ದಾರೆ. ಅದರಲ್ಲಿ ಹತ್ತನೆಯ ಒಂದು ಭಾಗವನ್ನು ಕೂಡ ಸರ್ಕಾರದವರು ಜಾರಿಗೆ ತಂದಿಲ್ಲ. ಖರ್ಚನ್ನು ಎಷ್ಟು ಮಟ್ಟಿಗೆ ಕಡಿಮೆ ಮಾಡಬಹುದೋ ಅಷ್ಟು ಮಟ್ಟಿಗೆ ಮಾಡಿ ಎಷ್ಟು ಮಟ್ಟಿಗೆ ಉತ್ಪನ್ನವಾಗಿ ಆದಳಿತವನ್ನು ನಡೆಸಬಹುದೋ ಅಷ್ಟು ಮಟ್ಟಿಗೆ ನಡೆಸಿ, ಹಾಗೂ ಹಣ ಸಾಲದೇ ಹೋದರೆ ಸರ್ಕಾರ ಹೊಸ ತೆರಿಗೆಯನ್ನು ಹಾಕಬಹುದು ಧರ್ಮ. ಹಾಗಿಲ್ಲದೆ ವರ್ಷ ವರ್ಷವೂ ಹೆಚ್ಚಿಸಿಕೊಂಡು ಹೋಗುತ್ತಿರುವುದು, ಆಡಳಿತದಲ್ಲಿ ದುಂದು ವೆಚ್ಚವಾಗುತ್ತಿರುವುದು—ಇದನ್ನು ಎಲ್ಲಿಯವರೆಗೆ ಜನರು ಸಹಿಸಬಹುದೋ ಗೊತ್ತಿಲ್ಲ. ಮುಖ್ಯವಾಗಿ ಈ ತೆರಿಗೆಯನ್ನು ವಾದ್ರಾಸ್ ಸರ್ಕಾರದ ಮಾದರಿಯ ಮೇರೆ ಹಾಕುತ್ತಿದ್ದಾರೆಯೆ? ಬೇರೆ ಕಡೆಯ ಮಾದರಿ ಮೇರೆ ಹಾಕುತ್ತಿದ್ದಾರೆಯೆ? ಸರ್ಕಾರದ ಆಡಳಿತದಲ್ಲಿ ದಕ್ಷತೆಯಿಲ್ಲ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಪಾವಗಡಕ್ಕೆ ಸರ್ಕಾರಿ ರೋಡ್ ಟ್ರಾನ್ಸ್‌ಪೋರ್ಟ್ ಬನ್ನು ಹೋಗುತ್ತಿದೆ. ಈ ಮಾರ್ಗದಲ್ಲಿ ಮಧ್ಯೆ ಇಂಡಿಯರ್ ಡೊಮಿನಿಯರ್‌ಗೆ ಸೇರಿದ ಪ್ರದೇಶ ಇದೆ. ಅದರ ಬೌಂಡರಿಯಿಂದಾಚೆ ಪಾವಗಡ ಇರುವುದು. ಆ ಮಧ್ಯದ ಪ್ರದೇಶದಲ್ಲಿರುವ ಹನ್ನೊಂದು ಮೈಲಿ ಮಾರ್ಗ ಅವರಿಗೆ ಸೇರಿರುವುದಕ್ಕೆ ಅವರು ನಮ್ಮ ಬನ್ನುಗಳಿಗೆ ರಹದಾರಿ ಕೊಡದೆ ಪ್ರಯಾಣೀಕರಿಗೆ ಎಷ್ಟೋ ತೊಂದರೆಯಾಗುತ್ತಿದೆ. ಅವರಿಂದ ರಹದಾರಿ ಪಡೆಯಲು ಸರ್ಕಾರದವರಿಗೆ ಸಾಧ್ಯವಿಲ್ಲವಾಗಿದೆ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದಕ್ಕೂ ಈ ಮಸೂದೆಗೂ ಸಂಬಂಧವೇನು?

ಶ್ರೀ ಬಿ. ಹುಚ್ಚೇಗೌಡರು.—I can oppose the Bill on any ground. ಸರ್ಕಾರದ ದಕ್ಷತೆ ವಿಷಯ ಹೇಳುತ್ತಿದ್ದೇನೆ.

ಸರ್ಕಾರಿ ಬನ್ನು ಹಾಕಿದ ಮೇಲೆ ಈಚೆಗೆ ಇಬ್ಬರು ಖಾನಗಿಯವರು ಬನ್ನನ್ನಿಟ್ಟರು, ಪ್ರಯತ್ನಪಟ್ಟರು, ಅವರಿಗೆ ತಕ್ಷಣ ರಹದಾರಿ ದೊರೆಯಿತು. ಹೀಗಿದ್ದರೂ ಇನ್ನೂ ಸರ್ಕಾರಿ ಬನ್ನು ತರೆ ಮೇಲೆ ಮುಸುಕು ಹಾಕಿಕೊಂಡು ಬೌಂಡರಿ ಹತ್ತಿರ ನಿಲ್ಲುತ್ತಿದೆ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಮುಸುಕು ಹಾಕಿಕೊಂಡು ನಿಂತಿರುವುದಕ್ಕೂ ಈ ತೆರಿಗೆಗೂ ಏನು ಸಂಬಂಧ?

ಶ್ರೀ ಬಿ. ಹುಚ್ಚೇಗೌಡರು.—ಸರ್ಕಾರದ ದಕ್ಷತೆಯ ವಿಷಯದಲ್ಲಿ ಉದಾಹರಣೆ ಹೇಳಬಹುದೆಂದು ಹೇಳುತ್ತಿದ್ದೇನೆ. ಅಧ್ಯಕ್ಷರು ಬೇಡವೆಂದು ಹೇಳಿದರೆ, ಹೇಳುವುದಿಲ್ಲ.

ಮಾನ್ಯ ಶ್ರೀ ಎಚ್ ಸಿ. ದಾನಪ್ಪನವರು.—ನಮಗೆ ಅರ್ಥವಾಗಲಿಕ್ಕಾಗಿಲ್ಲವೆಂದು ಕಾಣುತ್ತದೆ!

ಶ್ರೀ ಬಿ. ಹುಚ್ಚೇಗೌಡರು.—ಇವಕ್ಕೆ 29 ಲಕ್ಷ ರೂಪಾಯಿ ಬಂಡವಾಳ ಹಾಕಿ, ಇದರಿಂದ 29 ಸಾವಿರ ವರಮಾನ ಬರುತ್ತಿದೆ.....

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—29 ಲಕ್ಷವಲ್ಲ, 23 ಲಕ್ಷ ಎಂದು ಪದೇ ಪದೇ ಹೇಳಿದ್ದೇನೆ.

ಶ್ರೀ ಬಿ. ಹುಚ್ಚೇಗೌಡರು.—ಆದರಲ್ಲಿ ಉತ್ಪತ್ತಿ ಸರಿಯಾಗಿ ಬರುತ್ತಿದ್ದಿದ್ದರೆ ಈಗ 20 ಲಕ್ಷ ರೂಪಾಯಿ ತೆರಿಗೆಯನ್ನೇಕೆ ಹಾಕಬೇಕು?

ಮದರಾಸು ಸರ್ಕಾರದವರಿಗೂ ನಮ್ಮ ಸರ್ಕಾರಕ್ಕೂ ಪರಸ್ಪರ ರಿಯಾಯಿತಿ ಒಪ್ಪಂದ ಬಂದಿದೆ. ನಮ್ಮ ಗಡಿಯಲ್ಲಿ ಸ್ವಲ್ಪದೂರ ಅವರ ಕಡೆ ಬಸ್ಸುಗಳು ಬಂದರೆ ಅವರು ನಮಗೆ ತೆರಿಗೆ ಕೊಡಬೇಕಾಗಿಲ್ಲ; ಹಾಗೆಯೇ ಅವರ ಗಡಿಯೊಳಕ್ಕೆ ಸ್ವಲ್ಪದೂರ ನಮ್ಮ ಬಸ್ಸುಗಳು ಹೋದರೆ ನಾವೂ ಅವರಿಗೆ ತೆರಿಗೆ ಕೊಡಬೇಕಾಗಿಲ್ಲ. ಹೀಗಿದ್ದರೂ ಮೈಸೂರು ಗಡಿಯೊಳಕ್ಕೆ ಅವರು ಬರುವುದಕ್ಕೆ ಏನೂ ಇಲ್ಲದೆ ನಮ್ಮ ಸರ್ಕಾರದವರು ಅವಕಾಶ ಕೊಡುತ್ತಾರೆ. ಆದರೆ ನಮ್ಮ ಬಸ್ಸುಗಳು ಅಲ್ಲಿ ಹೋದರೆ ಅವರು ಅಡ್ಡಿ ಹಾಕುತ್ತಾರೆ. ನಾವು ಆ ರಸ್ತೆಯನ್ನು ಆಬಾದು ಮಾಡಲು ಖರ್ಚುಮಾಡುತ್ತಿದ್ದರೂ ನಮಗೆ ಅವರಿಂದ ಒಂದು ಕಾಸೂ ಬರುವುದಿಲ್ಲ. ನಮ್ಮವರು ಅವರ ಪ್ರದೇಶಕ್ಕೆ ಹೋದರೆ ವಸೂಲು ಮಾಡುತ್ತಾರೆ. ಆದನ್ನೂ ನಮಗೆ ಕೊಡುವುದಿಲ್ಲ. ಆದಕಾರಣ ಅವರಿಂದ ವಸೂಲು ಮಾಡುವುದು ನ್ಯಾಯ. ಹಾಗೆ ಮಾಡದಿದ್ದರೆ ಬಸ್ಸಿನವರಿಗೇ ಹಣ ಉಳಿದು ಹೋಗುತ್ತದೆ. ಹೀಗೆ ಎಲ್ಲೆಲ್ಲಿಯೂ ಲೋಪದೋಷಗಳಿವೆ. ಇವು ಸರ್ಕಾರದ ಗಮನಕ್ಕೆ ಬಂದಾಗಲೂ ಅವರು ಸರಿಪಡಿಸುತ್ತಿಲ್ಲ. ಇಂತಹ ಕೆಲವು ಸಂದರ್ಭಗಳಲ್ಲಿ ಎರಡು ಸರ್ಕಾರಗಳಿಗೂ ಸೆಸ್ ದೊರೆಯುವುದಿಲ್ಲ.

ಅಧ್ಯಕ್ಷರು.—ಅದಕ್ಕೂ ಇದಕ್ಕೂ ಏನು ಸಂಬಂಧ?

ಶ್ರೀ ಬಿ. ಹುಚ್ಚೇಗೌಡರು.—ನಮಗೆ ಬರಬೇಕಾದ ವರಮಾನ ಹೋಗುವುದಿಲ್ಲವೆ? This taxation is not justified on that ground.

ಶ್ರೀ ಕೆ. ಸಂಪಂಗಿರಾಮಯ್ಯನವರು.—That is not the only object. ಇದರಿಂದ ಆ ನಷ್ಟವನ್ನು ಭರ್ತಿಮಾಡುವುದಕ್ಕಾಗಿ ಈ ಸೆಸ್ಸನ್ನು ಹಾಕುತ್ತಿದ್ದಾರೆಂದು ಅವರು ಹೇಳುತ್ತಿದ್ದಾರೆ, ಅದು ಸರಿಯಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಬಡ್ಜೆಟ್‌ನಲ್ಲಿ ಅಷ್ಟು ಖೋತಾ ಆಗಿರುವುದನ್ನು ಭರ್ತಿಮಾಡುವುದೊಂದೇ ಉದ್ದೇಶವಾಗಿದ್ದಿದ್ದರೆ ಅವರು ಹೇಳುವವಾದ ಸರಿ, ಆದರೆ ಹಾಗಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಸರ್ಕಾರಕ್ಕೆ ಎಲ್ಲೆಲ್ಲಿ ನಷ್ಟವಾಗುತ್ತಿದೆ ಎಂಬುದನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಎಲ್ಲೆಲ್ಲಿ ನಷ್ಟವಾಗುತ್ತಿದೆಯೋ ಅದನ್ನು ಸರಿಮಾಡಿಕೊಳ್ಳುವುದೇನೋ ಸರಿ; ಆದರೆ ಈ ತೆರಿಗೆ ವಿಚಾರವೇನು ಹೇಳಿ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ರಿಪ್ರೆಂಚ್‌ಮೆಂಟ್ ವಿಚಾರದ ಮೇಲೆ ಒಂದೆರಡು ಘಂಟೆ ಕಾಲ ವ್ಯಾಖ್ಯಾನ ಮಾಡಬಹುದು, ಆದರೆ ಅದೆಲ್ಲ ಈಗ ಅನಾವಶ್ಯಕ.

ಶ್ರೀ ಬಿ. ಹುಚ್ಚೇಗೌಡರು.—ನಮ್ಮ ಧ್ಯೇಶದ ಆದಾಯವನ್ನು ಹೆಚ್ಚಿಸುವುದಕ್ಕೆ ಬೇರೆ ಪ್ರಯತ್ನಗಳನ್ನು ಮಾಡುವುದು ಬಿಟ್ಟು, ಈ ಹೊಸ ತೆರಿಗೆ ಹಾಕಲು ಒಪ್ಪಿಕೊಳ್ಳಿ ಎಂದರೆ ಹೇಗೆ ಒಪ್ಪುವುದು? ಇದು ನ್ಯಾಯ, ಇದು ಸರಿ ಎಂದು ನಮಗೆ ತೋರಿಸಿದರೆ ಒಪ್ಪಬಹುದು. ಎಲ್ಲ ಬಾಬುಗಳಲ್ಲಿಯೂ ಸರಿಯಾಗಿ ಮಾಡುತ್ತಿದ್ದೇವೆ, ಎಲ್ಲಿಯೂ ಹಣ ದುರ್ವ್ಯಯವಾಗಲು ಅವಕಾಶಕೊಡದೆ ಎಲ್ಲೆಲ್ಲಿ ಉಳಿತಾಯವಾಗಬಹುದೋ ಅಲ್ಲಿ ಉಳಿತಾಯ ಮಾಡುತ್ತೇವೆಂಬುದನ್ನು ಸರ್ಕಾರ ತೋರಿಸಲಿ. ಈ ರೀತಿ ಹೊಸತೆರಿಗೆಯನ್ನು ಹಾಕಬೇಕಾದರೆ, ಇದರಿಂದ ಜನರಿಗೆ ಹೆಚ್ಚು ಸೌಕರ್ಯ ಒದಗಬೇಕು, ಅದಿಲ್ಲ. ನಾನೇ ಹೇಳಿದ್ದೇನೆ ಸಮಿತಿಯಲ್ಲಿ, ರೋಡ್ ಸೆಸ್ಸನ್ನು ಒಂದಾಣೆಮಾಡಿ ಎಂದು. ಆದರೆ ಒಂದು ದಾಮಾಷಾ ಪ್ರಕಾರ ಹೆಚ್ಚುಮಾಡಿದರೆ ಆಥವ ಬೇರೆ ಯಾವ ರೀತಿ ಮಾಡಿದರೂ ಆದರಿಂದ ಜನರಿಗೆ ಎಷ್ಟು ಮಟ್ಟಿನ ಸೌಕರ್ಯದೊರೆಯುತ್ತದೆಯೆಂಬುದನ್ನು ಯೋಚಿಸಬೇಕು. ಅಗ್ರಿಕಲ್ಚರಲ್ ಸೆಸ್ ಹಾಕಿದರೆ ವ್ಯವಸಾಯಕ್ಕೆ ಯಾವ ರೀತಿ ಸೌಕರ್ಯ ಹೆಚ್ಚುಮಾಡಿದ್ದಾರೆಂದು ನೋಡಬೇಕು. ಈ ರೀತಿ ತೆರಿಗೆ ಹಾಕಿದರೆ ಖಾಸಗಿಯವರು ಬಸ್ಸುಗಳನ್ನು ಇಟ್ಟರೆ, ರಾರಿಗಳನ್ನಿಟ್ಟರೆ ಅವರಿಗೂ ತೊಂದರೆ, ಜನರಿಗೂ ತೊಂದರೆಯಾಗುತ್ತದೆ. ಇದರಲ್ಲಿ 22ನೆಯ ಸೆಕ್ಷನ್‌ನಲ್ಲಿ

"From the proceeds of the taxes and the tolls collected under this Act, tho Government shall pay annually to each District Board which prior to 1st January 1936 was levying tolls and to each Municipal Council which prior to 1st January 1936 was levying a vehicle tax on motor vehicles, a sum determined by the Government after consulting the District Board or the Municipal Council concerned, as representing the average annual income of each District Board from tolls and of each Municipal Council from vehicle tax on motor vehicles during the three years ending with the 30th day of June, 1935, after deducting therefrom such expenses of collection as may be determined by the Government."

ಎಂದಿದೆ. 1935 ರಿಂದ ಮೂರು ವರ್ಷದ average ಎಂದರೆ, ಆಗ ಎಷ್ಟು ಬಸ್ಸುಗಳು ಓಡಾಡುತ್ತಿದ್ದವು, ಈಗ ಎಷ್ಟಿವೆ, ಆಗ ಏನು ದರ ಇತ್ತು, ಈಗ ಯಾವ ರೀತಿ ಇದೆ ಎಂಬುದನ್ನು ನೋಡದೆ 1936ನೆಯ ವರ್ಷದಲ್ಲಿದ್ದ ಪ್ರಕಾರ ಲೆಕ್ಕಸಾಕಿ ಕೊಟ್ಟರೆ, ಡಿಸ್ಟ್ರಿಕ್ಟ್ ಬೋರ್ಡಿನವರು ಈಗ ಹೇಗೆ ರಸ್ತೆಗಳನ್ನು ಆಬಾದು ಮಾಡಲು ಸಾಧ್ಯ?

'The average annual income of each District Board from tolls and of each Municipal Council from vehicle tax on motor vehicles during the three yars ending with the 30th day of June 1935, after deducting therefrom such expenses of collection as may be determined by the Government."

ಎಂದಿದೆ. ಉದಾಹರಣೆಗೆ ರೋಡ್ ಸೆಸ್ಸನ್ನು ವಸೂಲು ಮಾಡಬೇಕಾದರೆ ಡಿಸ್ಟ್ರಿಕ್ಟ್ ಬೋರ್ಡಿನವರಿಗೆ collection charges ಇರುವುದಿಲ್ಲ. ಹೀಗಿದ್ದರೂ ಅದಕ್ಕೆ 15% ಇದಕ್ಕೆ 35% ಎಂದು ಲೆಕ್ಕ ಹಾಕಿ ಕಳೆದು ಆ ಹಿಂದಿನ ಮೂರು ವರ್ಷದ ಸರಾಸರಿ ಮೊಬಲಗನ್ನು ಅವರು ತೆಗೆದುಕೊಳ್ಳಬೇಕೆಂದರೆ, ಅದೂ ಆಗಿನ ಸೆಸ್ ಮೇಲೆ ಲೆಕ್ಕ ಹಾಕಿ ಕೊಟ್ಟರೆ, ಏನಾಗುತ್ತದೆಂಬುದನ್ನು ನೋಡಬೇಕು. ಅದಲ್ಲದೆ ಒಂದು ಸಾರಿ ಓದುವುದಕ್ಕೂ ಕೂಡ ನೀವು ಅವಕಾಶ ಕೊಟ್ಟಿಲ್ಲ. ಹೀಗಿರುವಾಗ ಮುಂದೆ ಇದರ implications ಯಾವ ಯಾವ ರೀತಿ ಇರುತ್ತದೆ ಯೆಂಬುದನ್ನು ಹೇಗೆ ಹೇಳುವುದಕ್ಕಾಗುತ್ತದೆ? ಸದ್ಯಕ್ಕೆ ಈ ಮಸೂದೆ ಜಾರಿಗೆ ಬರದಿರುವುದರಿಂದೇನೂ ತೊಂದರೆಯಿಲ್ಲ. ಆದ್ದರಿಂದ ದಯವಿಟ್ಟು ತಾವಿದನ್ನು ಮುಂದಿನ ಅಧಿವೇಶನದಲ್ಲಿ ತರಬೇಕೆಂದು ಕೇಳಿಕೊಳ್ಳುತ್ತೇವೆ. ಈಗಲೇ ಇದನ್ನು ಖಂಡಿತ ಜಾರಿಗೆ ತರಕೂಡದೆಂದು ನಾನು ಹೇಳುತ್ತೇನೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮುಂದಿನ ಅಧಿವೇಶನದಲ್ಲಿ ತಂದರೆ ಒಪ್ಪಿಗೆ ಕೊಡುತ್ತೀರೋ?

ಶ್ರೀ ಬಿ. ಹುಚ್ಚೇಗೌಡರು.—ಯಾವ್ಯಾವುದಕ್ಕೆ ಒಪ್ಪಿಗೆ ಕೊಡಬಹುದೋ ಅವಕ್ಕೆ ಒಪ್ಪಿಗೆ ಕೊಡುವುದರಲ್ಲಿ ನೇನೂ ಆಭ್ಯಂತರವಿಲ್ಲ.

ಶ್ರೀ ಬಿ. ಚೆನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).— ಅಧ್ಯಕ್ಷರೆ, ನಾನು ಈ ಮಸೂದೆಯನ್ನು ತೀವ್ರವಾಗಿ ವಿರೋಧಿಸಬೇಕಾಗಿದೆ. ತೆರಿಗೆ ಹಾಕುವುದರಲ್ಲಿ ಮುಖ್ಯವಾಗಿ ಅಡಗಿರಬೇಕಾದ ಮುಖ್ಯ ತತ್ವವೇ ನೆಂದರೆ, ಅದನ್ನು ಯಾವ ಉದ್ದೇಶದಿಂದ ಹಾಕುತ್ತಿರೋ ಆ ಉದ್ದೇಶಕ್ಕೆ ಮಾತ್ರ ಉಪಯೋಗಿಸಬೇಕು. ಈಗ ನೀವು ಹಾಗೆ ಉಪಯೋಗಿಸುತ್ತಿಲ್ಲವೆಂಬುದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ಈಗ ನೀವು ವಿದ್ಯಾಭ್ಯಾಸದ ಸೆಸ್ ಹಾಕಿದ್ದೀರಿ. ಅದನ್ನು ಒಟ್ಟು ದೇಶಾದ್ಯಂತವೂ ವಿದ್ಯೆ ಹರಡುವುದಕ್ಕೆ ಉಪಯೋಗಿಸುತ್ತಿದ್ದೀರಾ ! ಬೆಂಗಳೂರು, ಮೈಸೂರು, ಕೆ.ಜಿ.ಎಫ್. ಮುಂತಾದ ಕಡೆಗಳಲ್ಲಿ ಮಾತ್ರ ವಿನಿಯೋಗವಾಗುತ್ತಿದೆಯೇ ಹೊರತು ಗ್ರಾಮಾಂತರ ಪ್ರದೇಶಕ್ಕೆ ಇದರ ಲಾಭವೇನಾದರೂ ದೊರೆತಿದೆಯೇ ? ಅದೇ ರೀತಿ ಮೆಡಿಕಲ್ ಸೆಸ್ಸು, ಹೆಲ್ತ್ ಸೆಸ್ಸು ಮುಂತಾದುವು.

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಹೆಲ್ತ್ ಸೆಸ್ ಎಲ್ಲಿ ಹಾಕಿದೆ ?

ಶ್ರೀ ಬಿ. ಚೆನ್ನಬೈರೇಗೌಡರು.—ಹೆಲ್ತ್‌ಸೆಸ್ ಇಲ್ಲ, ರೈಲ್ವೆ ಸೆಸ್. ಅಂತೂ ಇಂಥ ಯಾವ ಸೆಸ್ ಹಾಕಿದರೂ, ಅದರಿಂದ ಬಂದ ಹಣವನ್ನು ಮುಂಚೆ ಯಾವ ಉದ್ದೇಶಕ್ಕಾಗಿ ಆ ಸೆಸ್ ಆ ಹಾಕುತ್ತೇವೆಂದು ಹೇಳಿರುತ್ತೀರೋ ಅದೇ ಉದ್ದೇಶಕ್ಕೇ ಉಪಯೋಗಿಸುತ್ತೀರೆಂಬ ನಂಬಿಕೆ ಇಲ್ಲ. ಈಗ ಈ ಸೆಸ್ಸನ್ನೇ ತೆಗೆದುಕೊಳ್ಳುವುದಾದರೂ ಈ ಎರಡು ವರ್ಷ ದಹಿಂದೆ ಈ ಮೋಟಾರು ವಾಹನಗಳ ತೆರಿಗೆಯನ್ನು 50ಪರ್‌ಸೆಂಟ್ ನಷ್ಟು ಜಾಸ್ತಿ ಮಾಡಿದರು. ಹೀಗೆ ಹೆಚ್ಚಿಗೆ ಹಣ ಬಂದದ್ದನ್ನು ರೋಡುಗಳನ್ನು ಉತ್ತಮ ಪಡಿಸಲಿಕ್ಕೇನಾದರೂ ಉಪಯೋಗಿಸಿದಿರಾ ? ಹಿಂದೆ ರಸ್ತೆಗಳು ಯಾವ ದುಸ್ಥಿತಿಯಲ್ಲಿತ್ತೋ ಈಗಲೂ ಹಾಗೆಯೇ ಇದೆ, ಕಾನಕಾನಹಳ್ಳಿಗೆ ಹೋಗುವ ರಸ್ತೆ, ನೋಡಿ. ಈಚೆಗೆ ಎರಡು ವರ್ಷದಿಂದ ನಾವು ಕೊಡುವುದು ಒಂದಕ್ಕೆರಡಷ್ಟಾದರೂ ರಸ್ತೆ ಸ್ಥಿತಿ ಮಾತ್ರ ಹೇಳತೀರದು.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಯಾವುದು ? ಸ್ಟೇಟ್ ಫಂಡ್ ರಸ್ತೆಯೇ ?

ಶ್ರೀ ಬಿ. ಚೆನ್ನಬೈರೇಗೌಡರು.—ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಯಾದರೂ ಡಿ. ಪಿ. ಡಬ್ಲ್ಯು. ರವರೇ ಅದನ್ನು ನೋಡಿಕೊಳ್ಳುವವರು. ನಮ್ಮ ಪಾಲಿನ ಹಣ ನಾವು ಕೊಟ್ಟುಬಿಟ್ಟ ಮೇಲೆ ಆ ರಸ್ತೆಯನ್ನು ಸರಿಯಾಗಿಡುವ ಜವಾಬ್ದಾರಿಯಾರದು ? ಈಗ ರಸ್ತೆ ಮೊದಲಿನಂತೆಯೂ ಇಲ್ಲ. ಇನ್ನೂ ಕಟ್ಟುಹೋಗಿದೆ. ಈಗಲೂ ಈ ತೆರಿಗೆ ಹಾಕುವುದನ್ನು ರಸ್ತೇಗೆ ಉಪಯೋಗಿಸುವುದಕ್ಕೆ ಖರ್ಚು ಮಾಡುತ್ತೀರಾ ? ನಿಮ್ಮ ಖೋತಾ ಬಜೆಟ್ಟನ್ನು ಸರಿಪಡಿಸಿಕೊಳ್ಳಲಿಕ್ಕೆ ಇದನ್ನು ತಂದಿದ್ದೀರಿ ಅಷ್ಟೆ. ಆದ್ದರಿಂದ ಈ ಬಿಲ್ಲನ್ನು ನಾನು ತೀವ್ರವಾಗಿ ವಿರೋಧಿಸಬೇಕಾಗಿದೆ. ಆದರೂ ಈಗಲೂ ಕೂಡ ತಾವು ನಾವು ಕೊಡತಕ್ಕ ರೋಡ್‌ಸೆಸ್, ಸೀಟಿಂಗ್‌ಟಾಕ್ಸ್, ವಾಹನದ ಟ್ಯಾಕ್ಸ್ ಮುಂತಾದುವುಗಳನ್ನೆಲ್ಲಾ ರಸ್ತೆಗಾಗಿಯೇ ಉಪಯೋಗಿಸುತ್ತೇವೆಂದು ಭರವಸೆ ಕೊಟ್ಟು ಮುಂದಿನ ಅಧಿವೇಶನದಲ್ಲಿ ಈ ಮಸೂದೆಯನ್ನು ತರುವುದಾದರೆ ನಮ್ಮ ಒಪ್ಪಿಗೆಯನ್ನು ಕೊಡುತ್ತೇವೆ. ಹಾಗಾದರೂ ತಾವು ಹೇಳುವುದಕ್ಕೆ ಸಿದ್ಧವಾಗಿದ್ದೀರಾ ?

ಈ ವಿಚಾರ ಮಾತನಾಡುತ್ತಾ ಮದ್ರಾಸ್ ಪ್ರಾಂತದಲ್ಲಿರತಕ್ಕ ತೆರಿಗೆಗಳನ್ನು ಹೋಲಿಕೆ ಮಾಡಿದರು. ನನಗೆ ತಿಳಿದ ಮಟ್ಟಿಗೆ ಅಲ್ಲಿರತಕ್ಕ ರಸ್ತೆಗಳು ಎರಡೇ ತರಹದ್ದು. ಒಂದು highway ಇನ್ನೊಂದು byway. ನಾನು ತಿರುಪತಿಗೆ ಹೋಗುವ ಸಂದರ್ಭದಲ್ಲಿ ಅಲ್ಲಿನ ರೋಡನ್ನು ನೋಡಿದ್ದೇನೆ. ತಿರುಪತಿಗೆ ಹೋಗುವ ದಾರಿ ಒಂದು byway ಆಗಿರುತ್ತೆ. ಆ ರಸ್ತೆ ನಮ್ಮ ರಸ್ತೆಗಿಂತ ಸಾವಿರ ಪಾಲು ಚೆನ್ನಾಗಿದೆ. ಅಲ್ಲಿನ ಸೇತುವೆಗಳು, ಎರಡು ಕಡೆಗಳಲ್ಲೂ ಇರುವ ಗಾರ್ಡ್ ಸ್ಟೋನುಗಳೂ ಅವಕ್ಕೆಲ್ಲಾ ಕಲರ್‌ವಾಷ್ ಮತ್ತು ಮೈಲಿ ಕಲ್ಲುಗಳು, ವ್ಯವಸ್ಥೆ ಇರತಕ್ಕ ಕಲ್ಲು, ಹ್ಯಾಂಡ್‌ಪೋಸ್ಟ್‌ಗಳು, ಹಳ್ಳಕೊಳ್ಳಗಳಿಲ್ಲದೆ ಇಟ್ಟಿರುವ ರೀತಿ ನೋಡಿದರೆ ನಿಜವಾಗಿಯೂ ಬಹಳ ಆನಂದವಾಗುತ್ತದೆ. ಇದನ್ನು ನಮ್ಮ ಮಾನ್ಯ ಮಂತ್ರಿಗಳು ಅನೇಕ ಸಾರಿ ನೋಡಿರುತ್ತಾರೆ. ನಮ್ಮ ರಸ್ತೆಗಳಲ್ಲಿ ರಕ್ಕೆಕಲ್ಲುಗಳಿರುವುದೇ ಕಾಣೆ. ರಸ್ತೆಗಳ ಸ್ಥಿತಿ ಹೇಳತೀರದು. ಇಷ್ಟಾದ್ದರೂ ನೀವು ಈ ತೆರಿಗೆಯ ಹಣವನ್ನು ಇದಕ್ಕೋಸ್ಕರವೇ ಖರ್ಚುಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಬಡ್ಜೆಟ್ಟಿನ ಹಣವನ್ನೆಲ್ಲಾ ದುಂದು ವೆಚ್ಚ ಮಾಡಿಬಿಟ್ಟು ನಿಮ್ಮ ದಂಡಿಗೆ ಭರ್ತಿ ಮಾಡಲು ನಾವು ತೆರಿಗೆ ತೆರಬೇಕಾಗಿದೆ.

ಅಲ್ಲದೆ ನೀವು ಹಾಕುವ ತೆರಿಗೆ ಬಸ್ ಮಾಲೀಕರ ಮೇಲೆ ಬೀಳುತ್ತದೆಯೇ ! ಬಸ್ಸಿನವರು ಎಂದೂ ಕೊಡುವುದಿಲ್ಲ. ಅವರು ಜನರ ತಲೆಯ ಮೇಲೆ ಹಾಕುತ್ತಾರೆ. ಹೀಗೆಯೇ ನೀವು ಬಂದ ಮೇಲೆ ಬಹು ಸಂಖ್ಯೆಯ ತೆರಿಗೆಗಳನ್ನು ಜನರ ಮೇಲೆ ಹೇರಿರುತ್ತೀರಿ ಮತ್ತು ಬಹಳ ನತಾಯಿಸುತ್ತಿದ್ದೀರಿ. ಸ್ಯಾಮ್ಸಾ, ಇದರ ಪರಿಣಾಮ ಎಲ್ಲಿಯವರೆಗೆ ಹೋಗಿದೆಯೆಂದರೆ ಖಾದಿ, ಕಾಕಿ, ಕಾವಿ ಧರಿಸುವ ಜನ ಬಂದು ಇಷ್ಟೊಂದು ತೊಂದರೆ ಕೊಡುತ್ತಿರುವುದರಿಂದ ಜನ ನಿಮ್ಮನ್ನು ನೋಡಿಶೆಂದರೆ ಹುಲ ನೋಡಿದಂತಾಗುತ್ತದೆಂದು ಹೇಳುತ್ತಾರೆ. ಆದ್ದರಿಂದ ಅದಷ್ಟುಮಟ್ಟಿಗೆ ಜನರಿಗಿರುವ ಈ ಹೊರೆಗಳನ್ನು ತಪ್ಪಿಸಿ ಸರಳ ರೀತಿಯಿಂದ ಜೀವಿಸುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು, ಜನರ ಮೇಲೆ ಈ ರೀತಿ ಹೇರುವ ತೆರಿಗೆಯ ಮಸೂದೆಯನ್ನು ಗೌರವವಾಗಿ ವಾಪಸು ತೆಗೆದುಕೊಳ್ಳಬೇಕಾಗಿ ವಿನಯದಿಂದ ಹೇಳಿ ನಾನು ಈ ಮಸೂದೆಯನ್ನು ತೀವ್ರವಾಗಿ ವಿರೋಧಿಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).— ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಚನ್ನಬೈರೇಗೌಡರು ಮುಕ್ತಾಯ ಮಾಡುತ್ತಾ, ಕಾಂಗ್ರೆಸ್ಸಿನವರನ್ನು ಕಂಡರೆ ಹುಲಿಗಳನ್ನು ಕಂಡ ಹಾಗಾಗುತ್ತದೆಂದು ಹೇಳಿದರು. ಬಹುಶಃ ಚನ್ನಬೈರೇಗೌಡರ ಕಣ್ಣಿಗೆ ನಾವು ಹುಲಿಗಳ ಹಾಗೆ ಕಾಣುತ್ತೇವೆಯೋ ಏನೋ !

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಸಿಂಹ ಸ್ವಪ್ನ !!

ಶ್ರೀ ಕೆ. ಪುಟ್ಟಸ್ವಾಮಿಯವರು.—ಅಷ್ಟೇ ಹೊರತು ಜನರಿಗೇನೂ ಅಂಥ ಭೀತಿಯಿಲ್ಲ. ಇವತ್ತು ವಿರೋಧ ಪಕ್ಷದ ಭಾಷಣವನ್ನು ಕೇಳಿದ್ದರಲ್ಲ ಅವರು ಯಾವತ್ತಿನಂತೆ ಒಂದೇ ಒಂದು ರೀತಿ ಹಿಡಿದು ವಾದ ಮಾಡುತ್ತಿದ್ದಾರೆ, ಅಷ್ಟೆ. ಯಾವ ಹೊಸ ತೆರಿಗೆ ಸೂಚಿಸಲಿ ಅದು ಸಿನಿಮಾ ಮೇಲೆ ಹಾಕುವುದಾಗಿರಲಿ, ಮೋಟಾರುಗಳ ಮೇಲೆ ಹಾಕುವುದಾಗಿರಲಿ, ಪೆಟ್ರೋಲಿನ ಮೇಲೆ ಹಾಕುವುದಾಗಿರಲಿ, ಬಡವರ ಮೇಲೆ ಬೀಳುತ್ತದೆಂಬ ಹಾಡು ಅದು. ಹೊಟ್ಟೆಗೆ ಬಟ್ಟೆಗೆ ಕೇಳಬೇಡಿ ಗಿಣಿ ಸಾಕಿದ ಹಾಗೆ ಸಾಕುತ್ತೇವೆಂದು ಗಾದೆ ಹೇಳಿದ ಹಾಗಾಯಿತು. ಬಡ್ಜೆಟ್ಟಿನ ಮೇಲೆ ಮಾತನಾಡುವಾಗ ರಸ್ತೆಗಳೆಲ್ಲಾ ಕೆಟ್ಟುಹೋಗಿವೆ, ಒಂದಕ್ಕೂ ರಿಪೇರಿ ಸರಿಯಾಗಿ ಆಗಿಲ್ಲ, ಸ್ಕೂಲುಗಳ ಸಂಖ್ಯೆ ಕಡಿಮೆ, ಆಸ್ಪತ್ರೆಗಳಿಗೆ ಡಾಕ್ಟರುಗಳಿಲ್ಲ ಎಂದು ಮುಂತಾಗಿ ಹೇಳುತ್ತಾರೆ. ಇವತ್ತಿನ ದಿವಸ ತಾನೇ ಶ್ರೀಮಾನ್ ಹುಚ್ಚೇಗೌಡರು ಮಾತನಾಡುತ್ತಾ ಕಡ್ಡಾಯವಾಗಿ ಪ್ರಾಥಮಿಕ ವಿದ್ಯಾ

ಭ್ಯಾನ ಜಾರಿಗೆ ತರಲಿಲ್ಲ, ಅದಕ್ಕೆ ಏನೇನೂ ಕಾರ್ಯ ಕ್ರಮ ಕೈಕೊಂಡಿಲ್ಲವೆಂದು ಹೇಳಿದರು. ಇದಕ್ಕೆಲ್ಲಾ ಹಣ ಒದಗಿಸಬೇಕಾದರೆ ಯಾವುದಾದರೂ ಒಂದು ಮಾರ್ಗವನ್ನು ತೋರಿಸಿದರೆ ಅದು ಕೂಡದೆಂದು ಹೇಳುತ್ತಾರೆ. ಸರ್ಕಾರಿ ನೌಕರರ ತಲಬಿನ ವಿಚಾರ ಬಂದರೆ ಅದರಲ್ಲೂ ಕೀಳು ದರ್ಜೆಯ ನೌಕರರಿಗೆ ಹೆಚ್ಚಿನ ಸಂಬಳ ಕೊಡಬೇಕು; ಸ್ಕೂಲುಗಳು ಸಾಲದ್ದರಿಂದ ಹೆಚ್ಚಿಗೆ ಸ್ಕೂಲುಗಳನ್ನು ಕೊಡಬೇಕು; ಆಸ್ಪತ್ರೆಗಳನ್ನು ಹೆಚ್ಚು ಹೆಚ್ಚಾಗಿ ತೆರೆಯಬೇಕು; ದೊಡ್ಡ ದೊಡ್ಡ ಕಾಮಗಾರಿಗಳನ್ನು ತೆಗೆದು ತೆಗೆದು ಮುಗಿಸಬೇಕು. ಈಗ ತಾನೆ ಲಕ್ಕವಳ್ಳಿ ವಿಚಾರ ಕೂಡ ಅವರು ಒತ್ತಾಯ ಮಾಡುತ್ತಾ, ನೀವು ಹೀಗೆಯೇ ಮಾಡುತ್ತಿದ್ದರೆ ಯಾವ ಕಾಲಕ್ಕೆ ಈ ಯೋಜನೆಯನ್ನು ಮುಗಿಸುತ್ತೀರಿ ಎಂದು ಕೇಳಿದರು. ಹೀಗೆ ವೆಚ್ಚದ ಬಾಬು ಬಂದರೆ, 50 ಕೋಟಿ ಹಾಕಿದರೂ ಸಾಲದೆಂದು ತೋರಿಸುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—ಕೇಂದ್ರದಿಂದ ತೆಗೆದು ಕೊಳ್ಳಿ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಹೌದು, ಧರ್ಮದ ಧತ್ರ !!

ಹೋಗಲಿ, ಇಂದಿನ ಬಾಬುಗಳಲ್ಲೇ ಹೇಗಾದರೂ ಸರಿಪಡಿಸಿಕೊಳ್ಳೋಣ, ಅದರಲ್ಲೂ ಜನರ ಮೇಲೆ ಯಾವುದು ಹೆಚ್ಚಿನ ಹೊರೆ ಬೀಳುವುದಿಲ್ಲ, ಅಂಥಾದ್ದನ್ನು ನೋಡಿ ಕಂದಾಯ ಹೆಚ್ಚಾಕಿ ನಮ್ಮ ಉತ್ಪತ್ತಿ ಜಾಸ್ತಿ ಮಾಡಿಕೊಳ್ಳೋಣವೆಂದರೆ ಅದನ್ನಾದರೂ ಒಪ್ಪಿಕೊಳ್ಳುತ್ತಾರೆಯೇ! ಈಗ ಮಾನ್ಯ ಸದಸ್ಯರಿಗೆಲ್ಲರಿಗೂ ಗೊತ್ತಾಗಿದೆ, ಯಾವ ರಸ್ತೆಯಲ್ಲಿ ನೋಡಲಿ ಅರ್ಧ, ಅರ್ಧ ಘಂಟೆಗೊಂದು ಬಸ್ಸು ಬರುತ್ತಿರುತ್ತದೆ. ಬಸ್ಸಿನಲ್ಲೋ ಜನರು ತುಂಬಿರುತ್ತಾರೆ. ಇದನ್ನು ನೋಡಿದರೆ ಪ್ರಯಾಣ ಮಾಡುವ ಜನರ ಕೈಯಲ್ಲಿ ಹಣ ಹೆಚ್ಚಾಗಿದೆಯೆಂದು ಕಾಣುತ್ತೆ. ಯಾವ ಗೊತ್ತು ಗುರಿಯೂ ಇಲ್ಲ. ಜನ ಬರೀ ಪ್ರಯಾಣವೊಂದನ್ನೇ ಗುರಿಯಾಗಿಟ್ಟುಕೊಂಡು ಹೋಗುತ್ತಿದ್ದಾರೋ ಏನೋ ಎಂದು ತೋರುತ್ತದೆ. ನಾನೇ ನೋಡಿದ್ದಂತೆ ನಮ್ಮ ಊರಿನಿಂದ ದಿನಕ್ಕೆ ಒಂದು ಬಸ್ಸೂ ಹೊರಡುತ್ತಿರಲಿಲ್ಲ. ಮೈನೂರು ಬೆಂಗಳೂರಿಗೆ ಒಬ್ಬಿಬ್ಬರು ಬಂದರೆ ಜಾಸ್ತಿ ಯಾಗುತ್ತಿತ್ತು. ಅಂಥಾದ್ದು ಈಗ ದಿವಸವೂ ನಾಲ್ಕಾರು ಬಸ್ಸುಗಳು ಬರುತ್ತವೆ. ಯಾವನು ಕಷ್ಟ ಪಟ್ಟು ದುಡಿದು ಸಂಪಾದನೆ ಮಾಡಬೇಕೋ ಅವನು ಪ್ರಯತ್ನ ಮಾಡುವುದಿಲ್ಲ. ಕೆಲಸವಿಲ್ಲದ ಅಣ್ಣಾವಚ್ಚಿ ಗಾರರೇ ಹೀಗೆ ಅಲ್ಲಿಂದಿಲ್ಲಿಗೆ ಓಡಾಡುವಂಥವರು!!

ಶ್ರೀ ಬಿ. ಹುಚ್ಚೇಗೌಡರು.—ಪೂಚ್‌ಲಾಯರುಗಳು !

ಶ್ರೀ ಕೆ. ಪುಟ್ಟಸ್ವಾಮಿಯವರು.—ಅದು ನಿಮ್ಮ ಅನುಭವ; ನನಗೆ ಗೊತ್ತಿಲ್ಲ.

ಶ್ರೀಮಾನ್ ಚನ್ನಬೈರೇಗೌಡರು ಹೇಳಿದರು, ಕಂದಾಯ ಹೀಗೆ ಜಾಸ್ತಿ ಮಾಡಿದರೆ ಅದರ ಹೊರೆಯಲ್ಲಾ ಪ್ರಯಾಣೀಕರ ಮೇಲೆ ಬೀಳುತ್ತದೆ ಎಂದು. ಹೌದು, ಪ್ರಯಾಣೀಕರ ಮೇಲೆಯೇ ಬೀಳಲಿ ಯಾರು ಬೇಡವೆಂದು ಹೇಳುತ್ತಾರೆ. ಇಂಥ ಪ್ರಯಾಣೀಕರ ಮೇಲೆ ಬಿದ್ದರೇನೂ ಚಿಂತೆಯಿಲ್ಲ. ಹಾಗೂ ಪ್ರಯಾಣೀಕರ ಮೇಲೆ ಬೀಳುವುದೂ ಅಲ್ಪ ಸ್ವಲ್ಪ. ಮುಖ್ಯವಾಗಿ ಬಸ್ಸುಗಳ ಪ್ರೊಪ್ರೈಟರುಗಳಿಗೆ ಹೆಚ್ಚು ಹೆಚ್ಚು ಲಾಭ ಬರುತ್ತಿದ್ದುದು ಇದರಿಂದ ಸ್ವಲ್ಪ ಕಡಿಮೆಯಾಗಬಹುದು. ವಾಸ್ತವವಾಗಿ ಈಗ ಪ್ರಯಾಣೀಕರು ಯಾರೂ ಅಷ್ಟಾಗಿ ಗಾಬಾಚಿ ಮಾಡುತ್ತಿಲ್ಲ.

ಹೀಗೆ ಆರು ಕಾಸುಗಳಿಗಿದ್ದ ತೆರಿಗೆಯನ್ನು ಎಂಟು ಕಾಸುಗಳಿಗೆ ಹೆಚ್ಚಿಸಿರತಕ್ಕ ಬಗ್ಗೆ ಪ್ರಜೆಗಳ್ಯಾರೂ ಗೊಣಗುಟ್ಟುವುದಿಲ್ಲ, ಹಾಗೆ ಗೊಣಗುಟ್ಟುತಕ್ಕವರೆಲ್ಲ ಬಸ್ಸುಗಳ ಮಾಲೀಕರು ಮತ್ತು ಬಸ್ಸುಗಳ ಮಾರಾಟ ಗಾರರು. ಆದರೆ ಹೀಗೆ ಮಾಡಿದ್ದರಿಂದ ಅವರಿಗೆ ಬರತಕ್ಕ ವರಮಾನವೇನೂ ಕಮ್ಮಿಯಾಗುವುದಿಲ್ಲ. ಇದರಿಂದ ಅವರು ತಮ್ಮ ವರಮಾನವನ್ನು ಇನ್ನೂ ಹೆಚ್ಚುಮಾಡಿ ಕೊಳ್ಳುತ್ತಾರೆ. ಕಾರಣ ಅವರು ಮಾಡತಕ್ಕಂಥ ಕಸುಬು ವರ್ತಕತನದ್ದು. ಶ್ರೀ ಹುಚ್ಚೇಗೌಡರಿಗೂ ಈ ವಿಚಾರ ಗೊತ್ತಿದೆ. ಈ ಬಗ್ಗೆ ತಿಳಿದಂಥ ಜನರು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನಗಳ ಮನಸ್ಸಿಂದೆ ಹೋಗಿ, ಹೀಗೆ ಬಸ್ಸುಗಳ ಸೀಟಿಂಗ್ ಟ್ಯಾಕ್ಸಿನ ದರವನ್ನು ಹೆಚ್ಚಿಸಿದ್ದೇವೆ. ಹಾಗೆ ಬರುವ ಹೆಚ್ಚಿನ ವರಮಾನದಿಂದ ರಸ್ತೆ ವಗೈರೆಗಳನ್ನೆಲ್ಲಾ ಒಳ್ಳೆ ದುರಸ್ತಿನಲ್ಲಿಡಲು ಅನುಕೂಲವಾಗುತ್ತದೆಂದು ಹೇಳಿದರೆ ಅವರು ಬಹಳ ಸಂತೋಷಭರಿತರಾಗಿ ಪೈಸೆಲೆಗೆ 8 ಕಾಸಲ್ಲ— 9 ಕಾಸುಗಳನ್ನು ಕೂಡ ಕೊಡಲು ಸಿದ್ಧರಾಗಿದ್ದೇವೆಂದು ಹೇಳತಕ್ಕ ಜನರನ್ನು ಕಾಣಬಹುದು. ಈ ಬಸ್ಸಿನ ಉದ್ಯಮದಲ್ಲಿರತಕ್ಕವರಿಗೆ ಹೆಚ್ಚಿನ ಲಾಭ ಬರುತ್ತೆ. ಹೀಗೆ ಅವರಿಗೆ ಬರತಕ್ಕ ಲಾಭದಲ್ಲಿ ಸ್ವಲ್ಪ ಭಾಗವನ್ನೂ ಬಸ್ಸುಗಳ ಮೇಲೆ ತೆರಿಗೆ ದರವನ್ನು ಹೆಚ್ಚು ಮಾಡುವುದರಿಂದ ಬರತಕ್ಕ ಹಣವನ್ನೂ ಅನೇಕ ಅಭಿವೃದ್ಧಿ ಕೆಲಸಗಳಿಗಾಗಿ ಸರ್ಕಾರದವರು ಉಪಯೋಗಿಸಬೇಕೆಂದಿದ್ದಾರೆ. ಹೀಗೆ ಸರ್ಕಾರದವರಿಗೆ ಹೆಚ್ಚು ವರಮಾನ ಹೊಂದಲು ಬೇರೆ ದಾರಿ ಯಾವುದೂ ಇಲ್ಲದಿರುವುದರಿಂದ, ಯಾರಿಗೆ ಹೆಚ್ಚಿನ ಲಾಭ ಬರುತ್ತದೆಯೋ ಅವರು, ಅವರಿಗೆ ಬರತಕ್ಕ ಲಾಭದಲ್ಲಿ ಸ್ವಲ್ಪ ಭಾಗವನ್ನು ಸರ್ಕಾರದವರು ತೆರಿಗೆ ರೂಪದಲ್ಲಿ ತೆಗೆದುಕೊಳ್ಳಬೇಕೆಂದು ಈ ಒಂದು ಮಸೂದೆಯನ್ನು ತಯಾರಿಸಿ ಇಂದು ನಮ್ಮೆಲ್ಲರ ಒಪ್ಪಿಗೆ ಪಡೆಯಲು ಇಟ್ಟಿದ್ದಾರೆ. ಮೊನ್ನೆತಾನೆ ಸರ್ಕಾರದವರು ಸಭೆಯ ಮುಂದೆ ಮಂಡಿಸಿದ್ದ ಆಯವ್ಯಯ ಪಟ್ಟಿಯನ್ನು ತಾವುಗಳು ತೆಗೆದು ನೋಡಿದರೆ ಅದರಲ್ಲಿ 8 ಲಕ್ಷ ರೂಪಾಯಿಗಳನ್ನು ಈ ರಸ್ತೆ ರಿಪೇರಿಗಾಗಿ ತೆಗೆದಿಟ್ಟಿರುವುದು ಕಂಡುಬರುತ್ತದೆ. ಈ ದುಡ್ಡು ಅವರಿಗೆ ಎಲ್ಲಿಂದ ಬರಬೇಕು? ಇನ್ನು ನಮಗೆ ಬರತಕ್ಕ ಇತರೇ ಬಾಬುಗಳ ಉತ್ಪತ್ತಿಯನ್ನು ಈ ರಸ್ತೆ ಬಾಬುಗೆ ಕೊಡಬೇಕೆಂದರೆ ಅದಕ್ಕೆ ಯಾರ ಒಪ್ಪುತ್ತಾರೆ? ದೇಶದಲ್ಲಿ ಈ ಮಧ್ಯೆ ಅನೇಕ ಖರ್ಚುಬಾಬಿನ ಕೆಲಸಗಳಿವೆ, ಅವಕ್ಕೆಲ್ಲ ಹಣ ಎಲ್ಲಿಂದ ಒದಗಿಸಬೇಕು? ಹೀಗೆ ವರಮಾನವಿಲ್ಲದೆ ಹೋದರೆ ಸರ್ಕಾರದವರು ಏನುತಾನೆ ಮಾಡಲಿಕ್ಕಾಗುತ್ತದೆ? ದೇಶದ ಹಿತದೃಷ್ಟಿಯಿಂದಲೇ ಈಗ ಸರ್ಕಾರದವರು ಈ ತೆರಿಗೆಗಳನ್ನೆಲ್ಲಾ ಹಾಕುತ್ತಿರುವುದು. ಈ ಅಂಶಗಳನ್ನೆಲ್ಲಾ ಮಾನ್ಯ ಸದಸ್ಯರುಗಳು ಗಮನಿಸಿದೆ, ಏನೋ ಒಂದು ಭಾವನೆಯಿಂದ ಎಲ್ಲಾ ಸಂದರ್ಭಗಳಲ್ಲೂ ಒಂದೇ ಹಾಡನ್ನು ಹಾಡುತ್ತ ಹೀಗೆ ವಿರೋಧಿಸುತ್ತಿರುವುದು ಪ್ರಗತಿ ಮಾರ್ಗದ ಲಕ್ಷಣಗಳಲ್ಲವೆಂದು ಸೂಚಿಸಬೇಕಾಗುತ್ತದೆ. ಇದರ ಸಾಧಕಬಾಧಕಗಳೇನು; ಇದರಿಂದ ಜನರಿಗೆ ಮತ್ತು ದೇಶಕ್ಕೆ ಉಪಕಾರವೇ, ಅಥವಾ ಅಪಕಾರವೇ ಎಂಬ ಅಂಶಗಳನ್ನೆಲ್ಲಾ ಪರ್ಯಾಲೋಚನೆ ಮಾಡಿ ಟೀಕೆ ಮಾಡಿದರೆ ಆಗ ಅದಕ್ಕೆ ಮಾನ್ಯತೆ ಇದೆಯೇ ವಿನಾ ಸುಮ್ಮನೆ ಬಸ್ಸಿನ ತೆರಿಗೆ ದರ ಹೆಚ್ಚು ಮಾಡಿದ್ದಾರೆ, ಆ ತೆರಿಗೆ ಹಾಕಿದ್ದಾರೆ, ಈ ತೆರಿಗೆ ಹಾಕಿದ್ದಾರೆ, ಎಂದು ವಾದ ಮಾಡಲಿಕ್ಕೇನೋ ಅನೇಕ ದಾರಿಗಳಿವೆ. ಆದರೆ ಅವು ಸರಿಯಲ್ಲ. ಸರಿಯಾದ ರೀತಿಯಲ್ಲ ವಾದ ಮಾಡದೆ, ಈಗಾಗಲೇ 8½ ಘಂಟೆ ಆಗಿದೆ. ಈ ಬಿಲ್ಲು ಕಾತೆಗಳನ್ನು ಇನ್ನೂ ಮೊದಲೇ ಕೊಡಬೇಕಾಗಿತ್ತು ಎಂಬುದಾಗಿ ಇಂಥಾ

(ಶ್ರೀ ಕೆ. ಪುಟ್ಟಸ್ವಾಮಿಯವರು).
ನಣ್ಣ ವಿಷಯಗಳನ್ನೆಲ್ಲಾ ಒಂದು ದೊಡ್ಡದನ್ನಾಗಿ ಹೇಳುತ್ತ ಆಕ್ಷೇಪಣೆ ಮಾಡತಕ್ಕದ್ದು ಸರಿಯಲ್ಲ ಮತ್ತು ಈ ಮಸೂದೆಯನ್ನು ನೆನ್ನೆಯ ದಿವಸವೇ ಕೊಡಬೇಕಾಗಿತ್ತು, ನಮಗೆ ಓದುವುದಕ್ಕೆ ಕಾರ್ಯಾಕಾಶವಿಲ್ಲವೆಂದು ಹೇಳತಕ್ಕದ್ದು ಅಷ್ಟು ಸರಿಯಾದ್ದಲ್ಲ. ಈ ಮಸೂದೆ ಇರತಕ್ಕದ್ದಾದರೂ ಕೇವಲ 5—6 ಹಾಳೆಗಳು. ಇಷ್ಟನ್ನು ಒಂದು ಘಂಟೆಯಲ್ಲಿ ಓದಿಬಿಡಬಹುದು. ಆದರೆ ಇಷ್ಟನ್ನೇ ಓದುವುದಕ್ಕಾಗುವುದಿಲ್ಲವೆಂದು ಹೇಳತಕ್ಕವರು ದೇಶದ ಮತ್ತು ಜನ ಪ್ರತಿನಿಧಿಗಳಾಗಿ ಬಂದು ಇಲ್ಲಿ ನಿಜವಾಗಿಯೂ ದೇಶದ ಜನಗಳ ಸೇವೆಯನ್ನು ಸರಿಯಾಗಿ ಮಾಡಿದಂತಾಗಲಲ್ಲವೆಂಬುದನ್ನು ನಾನು ಅವರಿಗೆ ಬಹಳ ನಮ್ರತೆಯಿಂದ ಹೇಳಬೇಕಾಗಿದೆ.

ಶ್ರೀ ಬಿ. ಎಚ್ ಬೋರಣ್ಣಗೌಡರು (ಹಾಸನ ಜಿಲ್ಲೆ).— ಇಲ್ಲ ಮಾತನಾಡತಕ್ಕ ಸದಸ್ಯರಲ್ಲ ಎದುರುಪಕ್ಷದವರು ಮಾತ್ರ ತೆರಿಗೆಯನ್ನು ಸಹ ಹಾಕುವುದು ಸರಿಯಲ್ಲ ಎಂದು ಹೇಳಿದ್ದಾರೆ ಈಗ ಬಸ್ಸುಗಳಲ್ಲ ಓಡಾಡತಕ್ಕ ಜನರಿಗೆ ಇದರಿಂದ ತೊಂದರೆಯಾಗುತ್ತದೆ, ದಯವಿಟ್ಟು ಇದನ್ನು ಹೆಚ್ಚಿಸಬೇಡಿ ಎಂದು ಯಾರೂ ಮಾದ ಮಾಡಿಲ್ಲ. ಹೀಗೆ ಯಾರು ತೆರಿಗೆಗಳನ್ನು ಹಾಕ ಬಾರದೆಂದು ಹೇಳುತ್ತಾರೋ ಅವರು ದೇಶದಲ್ಲಿರತಕ್ಕ ರಸ್ತೆಗಳು ಸರಿಯಾಗಿಲ್ಲ, ರಸ್ತೆ ರಿಪೇರಿಗಳನ್ನು ನೀವು ಸರಿಯಾಗಿ ಮಾಡಿಸುತ್ತಿಲ್ಲ ಎಂದು ಮಾದಿಸತಕ್ಕದ್ದು ಸರಿಯಲ್ಲವೆಂದು ಹೇಳಬೇಕಾಗುತ್ತದೆ. ಈ ರಸ್ತೆ ಚೆನ್ನಾಗಿಲ್ಲ, ಆ ರಸ್ತೆ ಚೆನ್ನಾಗಿಲ್ಲ ಎಂದು ಮಾನ್ಯ ಮಂತ್ರಿಗಳಿಗೆ ನಾವು ತಿಳಿಸಬೇಕಾದ್ದೆ ಇಲ್ಲ. ಈ ವಿಚಾರಗಳೆಲ್ಲವೂ ಅವರಿಗೆ ಗೊತ್ತಿರುತ್ತೆ. ಅದರೆ ದೇಶದಲ್ಲಿ ಸರ್ಕಾರಕ್ಕೆ ಆದಾಯ ನಾನಾ ಮುಖದಲ್ಲಿ ಬರುತ್ತಿದ್ದರೆ ಆಗ ದೇಶಾಭಿವೃದ್ಧಿಗೆ ಅಗತ್ಯವಾದ ಕೆಲಸಗಳನ್ನು ನಡೆಸಲು ಮಂತ್ರಿಮಂಡಲಕ್ಕೆ ಅವಕಾಶವಾಗುತ್ತದೆಯೇ ಶಿವಾಯಿ ನುಮ್ಮನೆ ವಿಚಾರ ತಿಳಿಸಿದ್ದರಿಂದಾಗಲೀ ಅಥವಾ ತಿಳಿದುಕೊಂಡಿದ್ದರಾಗಲಿ ಅಷ್ಟು ಪ್ರಯೋಜನವಾಗಲಾರದು. ಹೀಗೆ ಸಂಸ್ಥಾನದಲ್ಲಿರತಕ್ಕ ಜನರು ಯಾರ್ಯಾರು ಬಸ್ಸುಗಳಲ್ಲಿ ಓಡಾಡುತ್ತಿದ್ದಾರೋ ಅವರೆಲ್ಲರಿಗೂ ಈ ಹೆಚ್ಚಿನ ತೆರಿಗೆ ಬೀಳುತ್ತದೆಯೇ ಹೊರತು ಬಸ್ಸಿನ ಮಾಲೀಕರಿಗೇನೂ ಇದರಿಂದ ತೊಂದರೆಯಾಗುವುದಿಲ್ಲ. ಪ್ರಜೆಗಳಾದರೂ ಸಹ ಹೀಗೆ ದೇಶದಲ್ಲ ನಡೆಯಬೇಕಾದ ಪ್ರಗತಿಪರವಾದ ಖರ್ಚುವೆಚ್ಚಗಳಿಗೆ ಯಾರೂ ಕೊಡುವುದಿಲ್ಲವೆಂದು ಹೇಳುವುದಿಲ್ಲ. ಹಾಗಿರುವಾಗ ನಮ್ಮ ಎದುರು ಪಕ್ಷದ ಮಿತ್ರರು ದೇಶದಲ್ಲಿ ಪ್ರಗತಿದಾಯಕ ಬಾಬುಗಳಗೋಸ್ಕರ ಹಾಕತಕ್ಕ ತೆರಿಗೆಯನ್ನು ವಿರೋಧಿಸುವುದು ಸರಿಯಲ್ಲ. ಇದೇ ರೀತಿ ಆ ಹೆಲ್ತ್ ಸೆಸ್ಸನ್ನೂ ಕೂಡ ದೇಶದ ಕಲ್ಯಾಣಕ್ಕೋಸ್ಕರ ಹಾಕಿರುತ್ತಾರೆಯೇ ಹೊರತು ಬೇರೆ ಏನೂ ಇಲ್ಲ. ಆದರೆ ಇಂಥಾ ವಿಚಾರಗಳಲ್ಲಿ ಮಾನ್ಯ ಸದಸ್ಯರುಗಳು ಯಾವ ಸಂದರ್ಭದಲ್ಲಿ ವಿರೋಧಿಸಬೇಕು, ಯಾವ ಸಂದರ್ಭದಲ್ಲಿ ವಿರೋಧಿಸಬಾರದು ಎಂಬ ಇತ್ಯಾದಿ ಅಂಶಗಳನ್ನೆಲ್ಲಾ ಅವರು ಪರಿಶೀಲಿಸಿ, ದೇಶಾಭಿವೃದ್ಧಿಗೆ ಅನುಕೂಲವಾಗುವಂತೆ ಆದಾಯ ಪಡೆಯಲು ಇರತಕ್ಕ ಸರಿಯಾದ ಮಾರ್ಗಯಾವುದೆಂಬುದನ್ನು ಅವರು ತಿಳಿಸಿದ್ದರೆ ಆಗ ನಾನು ಬಹಳವಾಗಿ ಅವರನ್ನು ಅಭಿನಂದಿಸುತ್ತಿದ್ದೆ. ಆದರೆ ನಮ್ಮ ಆ ಮಿತ್ರರಿಗೆ ಏನೊ ಒಂದು ಸಂಶಯವಿದ್ದ ಹಾಗೆ ಕಾಣುತ್ತಿದೆ. ಅವರು ಬಹಳ ಮಟ್ಟಿಗೆ ಹಳ್ಳಿಗಾಡಿನ ಜನರ ವಿಶ್ವಾಸ ಪಡೆಯದೆ ಇರುವುದರಿಂದ, ಹೀಗೆ ಭಯಪಡುತ್ತಿದ್ದಾರೆಂದು ಕಾಣುತ್ತಿದೆ. ಅವರು ನಮ್ಮ ಹಳ್ಳಿಗಳ ಕಡೆ ಹೋಗಿ ತಿರುಗಿ ನೋಡಲಿ. ಹೀಗೆ ಜನರಿಗೆ ಹೊಸದಾಗಿ ಒಂದು ತೆರಿಗೆ ಹಾಕಿದ್ದೇವೆಂಬ ವಿಚಾರವನ್ನು ಅವರಿಗೆ ತಿಳಿಸಲಿ. ಹೀಗೆ ವಿವಿಧರಾಗಿರತಕ್ಕ ಸಸ್ಸು ದೇಶದ ಕಲ್ಯಾಣಕ್ಕಾಗಿ ಎಂಬ ಅಂಶವು ಅವರಿಗೆ ಗೊತ್ತಾದ ಕೂಡಲೇ ಅವರೆಲ್ಲರೂ ಬಹಳ ಸಂತೋಷಭರಿತರಾಗಿ, ಆನಂದ ಹೊಂದಿ, ಇಂಥಾ ದೇಶದ ಪ್ರಗತಿದಾಯಕ ಬಾಬುಗಳಿಗೆ ಇನ್ನೂ ಹೆಚ್ಚಿನ ತೆರಿಗೆಗಳನ್ನು ಕೊಡಲು ಅವರು ಇಷ್ಟವುಳ್ಳವರಾಗಿರುತ್ತಾರೆಂಬ ಅಂಶ ತಮಗೆ ಗೊತ್ತಾಗುತ್ತದೆ. ಅಂದರೆ ಆ ಹಳ್ಳಿಗಾಡಿನ ಜನರೂ ಕೂಡ ಈ ತೆರಿಗೆ ಕೊಡತಕ್ಕದ್ದು ಸರಿಯೆಂದು ಒಪ್ಪಿಕೊಳ್ಳುವವರಾಗಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಇದೆಲ್ಲ ನಾಳೆ ಸಾರ್ವತ್ರಿಕ ಚುನಾವಣೆ ಕಾಲದಲ್ಲಿ ಗೊತ್ತಾಗುತ್ತದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಈಗ ಚುನಾವಣೆ ವಿಚಾರ ಬೇಕಾಗಿಲ್ಲ. ಮುಂದೆ ಯಾರ ಬಲಾಬಲಗಳು ಹೇಗಿರುತ್ತವೆಂಬ ಪ್ರಶ್ನೆಗೆ ನಾನು ಈಗ ಕೈ ಹಾಕುವುದಕ್ಕೆ ಅವಕಾಶವಿಲ್ಲ. ಆದರೆ ಈಗ ಹಾಕಿರತಕ್ಕ ತೆರಿಗೆ ಸೂಕ್ತವಾಗಿದೆ. ದೇಶದ ಪ್ರಗತಿದಾಯಕದ ಬಗ್ಗೆ ಇನ್ನೂ ಹೆಚ್ಚು ಹೆಚ್ಚಿನ ತೆರಿಗೆಗಳನ್ನು ಹಾಕತಕ್ಕದ್ದು ಸರಿಯಾದ್ದೇ ಏನಾ ವಿರೋಧ ಪಕ್ಷದ ಮಾನ್ಯ ಸದಸ್ಯರು ತಿಳಿದುಕೊಂಡಿರುವ ಅಂಶ ಸರಿಯಾದ್ದಲ್ಲವೆಂದು ನಾನು ತಿಳಿಸಲಿಚ್ಛಿಸುತ್ತೇನೆ.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು (ಚಿತ್ರದುರ್ಗ ಜಿಲ್ಲೆ).—ಈ ಸೆಕ್ಷನ್ 3ರಲ್ಲಿ ಯಾವ ಯಾವ ಟ್ಯಾಕ್ಸ್‌ಗಳನ್ನು ಹಾಕಬೇಕೆಂಬ ವಿಚಾರವನ್ನು ತಿಳಿಸಲಾಗಿದೆ. ಆದರೆ ಈಗ ಈ ಎಲ್ಲಾ ಸೆಸ್ಸುಗಳ ಜೊತೆಗೆ ಈಗ ಪುನಃ ಜೋಲುಗಳನ್ನು re-introduce ಮಾಡಿದ್ದಾರೆಯೇ ಎಂಬ ವಿಚಾರವನ್ನು ಸ್ವಲ್ಪ ತಿಳಿದುಕೊಳ್ಳಬೇಕಾಗಿತ್ತು.

ಶ್ರೀ ಬಿ. ಹುಚ್ಚೇಗೌಡರು.—On a point of information, Sir. ಈ ರೋಡ್ ಫಂಡು ಸೆಸ್ಸಿನ ಬಗ್ಗೆ ಯಾವ ಯಾವ ನಮೂನೆ ಬಸ್ಸುಗಳಿಂದ ಎಷ್ಟೆಷ್ಟು ಹಣ ಬರುತ್ತೆಂಬುದನ್ನು ತಿಳಿಸಲಾಗುತ್ತದೆಯೇ?

The Hon'ble Sri H. C. DASAPPA.— No Road Fund.

Janab SYED ABDUR RAHMAN (Chikmagalur *cum* Shimoga-Muslim).— I just stood up to support the view expressed by my Hon'ble friend Sri B. N. Boranna Gowda. He said that if in the interests of the country any new tax is levied, that kind of tax will not be opposed. The Bill under consideration proposes to levy a new tax so far as Mysore is concerned. It has been pointed out in the Statement of Objects and Reasons that such a tax is prevailing in the neighbouring Province of Madras.

The Hon'ble Sri H. C. DASAPPA.— It is not a new one. It is an enhancement.

Janab SYED ABDUR RAHMAN.— You are levying it on the basis of laden weight. This system has been prevailing in Madras for a very long time. Mysore has taken initiative this time.

It is a very good object and there is every justification to levy this tax. The Honourable Leader of the Opposition said that every new tax should be opposed. That is not a very happy maxim. In these days you are having several new problems and you must find money for tackling them. Any tax which is justified has got to be levied and paid. So far as this tax is concerned, I do think there is any reason to oppose it. I wholeheartedly support this measure.

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಮಾನ್ಯ ಅಧ್ಯಕ್ಷರೆ, ನಾನು ತಮ್ಮನ್ನು ಮೊದಲೇ ವಂದಿಸಬೇಕಾಗಿತ್ತು. ಅಷ್ಟೇ ಅಲ್ಲದೆ ಮಾನ್ಯ ಸದಸ್ಯರನ್ನು ಕೂಡ ನಾನು ಮನಃಪೂರ್ವಕವಾಗಿ ವಂದಿಸಬೇಕಾಗಿದೆ. ಈ ಬಿಲ್ಲು ಈ ದಿವಸವೇ ಅಂಗೀಕಾರವಾಗಬೇಕಾದ ಅವಶ್ಯಕತೆಯಿತ್ತು. ಆ ಕಾರಣವು ಸ್ಪಷ್ಟವಾಗಿದೆ.

The Road Traffic Act is a combined enactment including taxation of motor vehicles. This will stand repealed by the first of April 1951. When the Central Motor Vehicles Act, 1929 was introduced, the Central Act laid down the principles relating to the regulation of motor vehicles only and that has nothing to do with taxation which is a provincial subject. That is why there was such an urgency so far as this Bill was concerned.

ಮುಖ್ಯವಾಗಿ ಇದಕ್ಕೆ ಈ ದಿವಸ ಅವಕಾಶ ಕೊಡುವುದರಲ್ಲಿ ಎಲ್ಲರಿಗೂ ಹೆಚ್ಚಿನ ಶ್ರಮವಾಗಿದೆ. ಆದರೂ ಕೂಡ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕೆ ನಾನು ತುಂಬಾ ಆಭಾರಿಯಾಗಿದ್ದೇನೆ. ಶ್ರೀ ಹುಚ್ಚೇಗೌಡರು ಒಂದು ಮಾತು ಹೇಳಿದರು. ರಸ್ತೆ ಫಂಡಿನಿಂದ ಅನೇಕ ವರ್ಷಗಳಿಂದ ಎಷ್ಟೋ ಹಣ ಬರುತ್ತಿದೆ. ಹಿಂದೆ ಇದ್ದ ಹಾಗೆ ರೋಡ್ ಫಂಡು ಬೇರೆ ಇಲ್ಲ. ರಸ್ತೆ ರಿಪೇರಿ, ಸ್ಪೆಷಲ್ ರಿಪೇರಿ, ಟಾರು ರಸ್ತೆಮಾಡುವುದು, ಆನ್ಯುಯಲ್ ರಿಪೇರ್ಸ್ ಇತ್ಯಾದಿ ಕಾರ್ಯಗಳು ಸರಿಯಾಗಿ ಆಗುತ್ತಿಲ್ಲ ಎಂದು ಆರೋಪಣೆ ಮಾಡಿದರು. 85ರಿಂದ 86 ಲಕ್ಷ ರೂಪಾಯಿಗಳವರೆಗೆ ಈ ಬಾಬಿಗೆ ಬಡ್ಜೆಟ್ಟಿನಲ್ಲಿ ಹಣ ಒದಗಿಸಿದೆ. ಇದರಲ್ಲಿ ಮೋಟಾರುವಾಹನಗಳ ಮೇಲಿನ ತೆರಿಗೆಯಿಂದ ನಮಗೆ 43¾ ಲಕ್ಷ ರೂಪಾಯಿಗಳು ಬರುತ್ತದೆ. ಒಟ್ಟು 85 ಲಕ್ಷದಲ್ಲಿ 43¾ ಲಕ್ಷ ಕಳೆದರೆ ಉಳಿಯುವುದು ಜನರಲ್ ರೆವನ್ಯೂನಿಂದ ಒದಗಿಸಿದೆ. ಈಗ ಬಡ್ಜೆಟ್ ಬೇರೆ ಖೋತಾ ಆಗಿದೆ. ಅದನ್ನು ಭರ್ತಿಮಾಡುವ ಸಲುವಾಗಿ ಈ ತೆರಿಗೆಯನ್ನು ಹಾಕಿದ್ದೀರಲ್ಲವೇ ಎಂದು ಪ್ರಶ್ನೆಮಾಡಿದ್ದಾರೆ. ಅದಕ್ಕೆ ಪ್ರಾರಂಭದಲ್ಲೇ ಉತ್ತರ ಹೇಳಿದೆ. ಮೋಟಾರು ವಾಹನಗಳ ಸಂಖ್ಯೆ ಇತ್ತೀಚೆಗೆ ತಿಳಿಸಿರುವ ಅಂಕಿ ಅಂಶಗಳ ಪ್ರಕಾರ ಹೆಚ್ಚಿದೆ.

It is resulting in heavy wear and tear to the roads. The cost of construction and maintenance of the roads has also increased enormously.

ರಸ್ತೆ ರಿಪೇರಿ ಮಾಡಿ ಉತ್ತಮಪಡಿಸಬೇಕೆಂದು ಈಗ ಎಂಟು ದಿವಸಗಳಿಂದಲೂ ಒಂದೇ ಸಮನಾಗಿ ಮಾನ್ಯ ಸದಸ್ಯರು ಅನೇಕರು ಅಭಿಪ್ರಾಯ ಪಡುತ್ತಿದ್ದಾರೆ. ಇಷ್ಟೆ ಅಲ್ಲದೆ ಶ್ರೀ ಬೋರಣ್ಣಗೌಡರು ಹೇಳಿದ ಹಾಗೆ ಅನೇಕ ಬಸ್ ಮಾಲೀಕರು ಹೆಚ್ಚು ಹಣ ಕೊಡಲು ಸಿದ್ಧವಾಗಿದ್ದಾರೆ. ಹೇಗಾದರೂ ಮಾಡಿ ರಸ್ತೆಗಳನ್ನು ಉತ್ತಮ ಸ್ಥಿತಿಗೆ ತರಬೇಕೆಂದು ಹೇಳುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಶ್ರೀ ಹುಚ್ಚೇಗೌಡರು ಹೇಳುವ ಹಾಗೆ ಹೆಚ್ಚಾಗಿ ಸೌಕರ್ಯವನ್ನುಂಟುಮಾಡಬೇಕಾದ್ದು ಬಹಳ ಮಟ್ಟಿಗೆ ಸರ್ಕಾರದ ಕರ್ತವ್ಯ ಎಂಬುದನ್ನು ಒಪ್ಪೋಣ. ಇಷ್ಟು ಹಣ ಜನರಲ್ ರೆವೆನ್ಯೂನಿಂದ ಒದಗಿಸುವುದನ್ನು ಮುಂದುವರಿಸಿದರೆ ಅದು ಸರಿಯಾದ ರೀತಿಯಲ್ಲಿ ಉಪಯೋಗವಾಗುತ್ತದೆಯಾದರೂ ಆ ಮಾರ್ಗವನ್ನನುಸರಿಸುವುದು ಸೂಕ್ತವೇ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು. ಆ ದೃಷ್ಟಿಯಿಂದ ನೋಡಿದರೆ ಸ್ವಲ್ಪ ಮಟ್ಟಿಗೆ ಹಣ ಭರ್ತಿ ಮಾಡಿಕೊಳ್ಳುವುದು ನ್ಯಾಯಸಮ್ಮತವಾದದ್ದೂ ಮತ್ತು ಅವಶ್ಯಕ ಎಂಬುದನ್ನು ನಾನು ಪ್ರಾರಂಭದಲ್ಲೇ ಅರಿಕೆ ಮಾಡಿಕೊಂಡಿದ್ದೇನೆ.

ಶ್ರೀ ಬಿ. ಚನ್ನಬ್ಯೈರೇಗೌಡರು.—ರೋಡ್ ಸೆಸ್ ತೆಗೆದುಕೊಂಡ ಮೇಲೆ ರಸ್ತೆಯನ್ನು ಉತ್ತಮ ಸ್ಥಿತಿಯಲ್ಲಿಡಬೇಕಾದ್ದು ಸರ್ಕಾರದ ಕರ್ತವ್ಯವಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಜನರಲ್ ರೆವೆನ್ಯೂನಿಂದ ಕೊಡುವ ಇಷ್ಟು ಮೊಬಲಗಿನಿಂದ 10 ಲಕ್ಷ ರೂಪಾಯಿಗಳು ಉತ್ಪತ್ತಿ ಬಂದರೂ ಅದನ್ನು ಉಪಯೋಗಿಸುವುದರಿಂದ ರಸ್ತೆ ಉತ್ತಮವಾಗಿ ಸಂಚಾರ ಸೌಕರ್ಯವಾಗಬಹುದು ಎಂಬ ಉದ್ದೇಶವಿದೆ. ಹಣ ಸಾಲದೆ ಕೆಲವು ರಸ್ತೆಗಳು ಸರಿಯಾಗಿಲ್ಲದಿರಬಹುದು. ಅದನ್ನು ಒಪ್ಪೋಣ. ಈಗ ಅವನ್ನು ಉತ್ತಮ ಸ್ಥಿತಿಗೆ ತರಬೇಕೆಂಬ ಉದ್ದೇಶದಿಂದಲೇ ಈ ತೆರಿಗೆಯನ್ನು ಹಾಕಲಾಗಿದೆ. ಅಲ್ಲದೆ ರಸ್ತೆ ಚೆನ್ನಾಗಿದ್ದರೆ ಬಸ್ ಮಾಲೀಕರಿಗೆ ಮತ್ತು ಲಾರಿ ಮಾಲೀಕರಿಗೆ ಅನುಕೂಲ ಹೆಚ್ಚು ಎಂಬುದನ್ನು ಹೆಚ್ಚಾಗಿ ಇಲ್ಲಿ ವಿವರಿಸಬೇಕಾಗಿಲ್ಲ. ಒಂದು ವಾಸ್ತವವಾದ ಅಂಶ ಹೇಳಿದರೆ ಅದನ್ನು ಸ್ವಲ್ಪ ಸೂಕ್ಷ್ಮವಾಗಿ ಯೋಚನೆ ಮಾಡಿದರೆ ಹೌದು ಎಂದು ಉತ್ತರ ಹೇಳುತ್ತೀರೆಂದು ನಂಬಿದ್ದೇನೆ. ಶ್ರೀ ಹುಚ್ಚೇಗೌಡರು ರಸ್ತೆ ಕ್ಲಾಸಿಫಿಕೇಷನ್ ಸಮಿತಿಯ ಸದಸ್ಯರಾಗಿದ್ದು ಬಹಳ ಮಟ್ಟಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ನಾನು ಆಗಲೇ ಅದನ್ನು ಹೇಳಲಿಲ್ಲವೆ?

The Hon'ble Sri T. MARIAPPA.—He not only wanted Government to spend more, but he agreed that the District Board also should give more.

ಶ್ರೀ ಬಿ. ಚನ್ನಬ್ಯೈರೇಗೌಡರು.—ಕೊಡುತ್ತಿರುವ ಗ್ರಾಂಟನ್ನು ದ್ವಿಗುಣ ಮಾಡಿ ಎಂದು ನಾನು ಅನೇಕ ಸಾರಿ ಹೇಳಿದ್ದೇನೆ. ಆದರೆ ಖೋತಾ ಬಡ್ಜೆಟ್ ಆಗಿದೆ ಎಂದು ಈಗ ಹೇಳುತ್ತೀರಿ.

ಶ್ರೀ ಬಿ. ಹುಚ್ಚೇಗೌಡರು.—ಈಗ ಒಂದು ಮೈಲಿ ಸಿಮೆಂಟ್ ಕಾನ್‌ಕ್ರೀಟ್ ಮಾಡುವುದಕ್ಕೆ ಬದಲಾಗಿ ಅದೇ ಹಣವನ್ನು ಹತ್ತು ಮೈಲಿ ರಸ್ತೆ ರಿಪೇರಿಗೆ ಉಪಯೋಗಿಸಬೇಕು. ಸಿಮೆಂಟ್ ಕಾನ್‌ಕ್ರೀಟ್ ಮಾಡುವುದು ಬೇಡ

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದನ್ನು ಹೆಚ್ಚಾಗಿ ಮಾಡಬೇಕು, ಗ್ರಾಮಾಂತರ ಪ್ರದೇಶಗಳಲ್ಲೂ ಕೂಡ ಮಾಡಬೇಕು ಎಂಬ ಉದ್ದೇಶವಿದೆ.

(ಮಾನ್ಯ ಶ್ರೀ ಎಚ್. ಸಿದ್ದಯ್ಯನವರು)

ಆಮೇಲೆ ಈ ಮಸೂದೆಯನ್ನು ಓದಿಕೊಂಡು ಬಂದಿಲ್ಲ, ಅದಕ್ಕೆ ಕಾಲಾವಕಾಶವಿರಲಿಲ್ಲ ಎಂದು ಶ್ರೀ ಚನ್ನಬ್ಯೆರೇಗೌಡರು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಟೀಕೆ ಮಾಡುವ ಉದ್ದೇಶದಿಂದ ಆ ರೀತಿ ಹೇಳಬಹುದೇ ಹೊರತು ಓದಿಲ್ಲದಿದ್ದರೆ ಈ ತರಹ ಅಭಿಪ್ರಾಯಗಳನ್ನು ಅವರು ಕೊಡುವುದಕ್ಕೆ ಸಾಧ್ಯವೆ? ಶ್ರೀ ಹುಚ್ಚೇಗೌಡರೂ ಸಹ ಚೆನ್ನಾಗಿ ಓದಿದ್ದಾರೆ, ಹಾಗಿಲ್ಲದಿದ್ದರೆ ಅವರು 22ನೆಯ ಆರ್ಟಿಕಲ್ ಮುಖ್ಯವೆಂದು ಹೇಳುತ್ತಿದ್ದರೆ? ಓದದಿದ್ದರೆ ಇಷ್ಟು ಅಭಿಪ್ರಾಯಗಳನ್ನು ಹೇಗೆ ಹೇಳುವುದಕ್ಕೆ ಸಾಧ್ಯ? ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಟ್ಟಿರುವುದಕ್ಕೆ ಹೆಚ್ಚಿಗೆ ಕೊಡಿ ಎಂದು ಹೇಳಿದ್ದಾರೆ. 1930ನೆಯ ಇಸವಿಯ ಒಪ್ಪಂದದ ಪ್ರಕಾರ ಪ್ರತಿ ವರ್ಷವೂ ಸ್ಥಳೀಯ ಸಂಸ್ಥೆಗಳಿಗೆ 5 ಲಕ್ಷ ರೂಪಾಯಿಗಳನ್ನು ಕೊಡುತ್ತಿದೆ. ಉತ್ಪತ್ತಿ ಹೆಚ್ಚುವಾಗ ಸ್ವಲ್ಪ ಹೆಚ್ಚು ಕಾಮಗಾರಿ ಮಾಡಬೇಕೆಂದು ಕೇಳುವುದು ನ್ಯಾಯ, ಸರ್ಕಾರಕ್ಕೂ ಹೆಚ್ಚಿಸಬೇಕಾದ ಸಮಯ ಒದಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇಂಥ ಸಂದರ್ಭದಲ್ಲಿ ಈ ಬಿಲ್ಲನ್ನು ಸರ್ವಾನುಮತದಿಂದ ಅನುಮೋದಿಸುತ್ತೀರೆಂದು ತಿಳಿದುಕೊಂಡಿದ್ದೇನೆ.

Mr. SPEAKER.—The question is:

"That the Mysore Motor Vehicles Taxation and Tolls Bill, 1951, be taken into consideration."

The motion was adopted.

Mr. SPEAKER.—The clauses of the Bill will now be submitted to the Assembly. Clauses 2 to 28, both inclusive.

The question is:

"The clauses 2 to 28, both inclusive, stand part of the Bill."

The motion was adopted.

Clauses 2 to 28, both inclusive, were added to the Bill.

Mr. SPEAKER.—Clause 1.

The question is:

"That clause 1 stand part of the Bill."

The motion was adopted.

Clause 1 was added to the Bill.

Mr. SPEAKER.—First, Second, Third and Fourth Schedules.

The question is:

"That the First, Second, Third and Fourth Schedules stand part of the Bill."

The motion was adopted.

The First, Second, Third and Fourth Schedules were added to the Bill.

Mr. SPEAKER.—Title and Preamble.

The question is:

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

The Hon'ble Sri H. SIDDAIYA.—Sir, I beg to move:

"That the Mysore Motor Vehicles Taxation and Tolls Bill, 1951, be passed."

Mr. SPEAKER.—The question is:

"That the Mysore Motor Vehicles Taxation and Tolls Bill, 1951, be passed."

The motion was adopted.

Fixing timings for the sitting on Monday 2nd April 1951.

The Hon'ble Sri H. C. DASAPPA (Minister for Finance and Industries).—Let us meet at one o'clock on Monday. That would be convenient because certain people have gone out and they prefer it to have the session at one o'clock.

ಶ್ರೀ ಬಿ. ಚನ್ನಬ್ಯೆರೇಗೌಡರು (ಬೆಂಗಳೂರು ಜಿಲ್ಲೆ).—ಎಲ್ಲಾ ಸದಸ್ಯರ ಅನುಕೂಲವನ್ನೂ ತಿಳಿದುಕೊಂಡು ಸಭೆ ಸೇರುವ ಕಾಲವನ್ನು ನಿರ್ಧರಿಸಬೇಕು. ಒಂದು ದಿನ 8 ಘಂಟೆಗೆ, ಒಂದು ದಿನ 4 ಘಂಟೆಗೆ, ಒಂದು ದಿನ ಒಂದು ಘಂಟೆಗೆ ಈ ರೀತಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಹೇಳುವಂತೆ ಮಾಡುವುದು ಈ ಮಾನ್ಯ ಸಭೆಯ ಗೌರವಕ್ಕೆ ಸರಿಯಿಲ್ಲ. ಒಂದು ಕಾರ್ಯಕ್ರಮ ಹಾಕಿಕೊಂಡರೆ ಅದೇರೀತಿ ಅನುಸರಿಸಬೇಕು. ಆರೀತಿ ಒಂದು ಸತ್ಸಂಪ್ರದಾಯವನ್ನು ಕಲ್ಪಿಸಬೇಕೆಂದು ಹೇಳುತ್ತೇನೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸಭೆಯ ಸದಸ್ಯರ ಅನುಕೂಲ ತಿಳಿದುಕೊಂಡು ಮಾನ್ಯ ಅಧ್ಯಕ್ಷರು ಯಾವಾಗ ಬೇಕಾದರೂ ಸಭೆಯನ್ನು ಕರೆಯಬಹುದು. ರಾತ್ರಿ 9 ಘಂಟೆಯಾಗಲೀ, ಸಾಯಂಕಾಲ 5 ಘಂಟೆಯಾಗಲೀ ಬೆಳಗ್ಗೆ 8 ಘಂಟೆಯಾಗಲೀ ಏನೂ ಅಡ್ಡಿ ಇಲ್ಲ. ಪಾರ್ಲಿಮೆಂಟಿನ ಕೆಲಸಗಳೇ ಹಾಗೆ.

Mr. SPEAKER.—The House will now rise for the day and meet again on Monday at One of the clock.

The Assembly adjourned at Thirty-Two Minutes past Nine of the Clock to meet again at One of the Clock on Monday, 2nd April 1951.

WD 3189—GPB—500—31-5-51